No.MAG(3)/NPP/98/2023-2024

No.MAG(3)/NPP/99/2023-2024

ಹೊಂದನಸು

ಸ್ಥಾಪನೆ : ೧೯೭೯

ಬಿ.ಎಂ.ಶ್ರೀ. ಪ್ರತಿಷ್ಠಾನದ ವಾರ್ತಾಲಾಪ

ಹೊಂದನಸು-೯೬

ಸಂಪುಟ: ೧೧ ಸಂಚಿಕೆ: ೮ | ನವೆಂಬರ್ ೨೦೨೩ | ಪುಟಗಳು-೮ | ವಾರ್ಷಿಕ ಚಂದಾ ರೂ.೨೦/- | ಶ್ರೀ ಶೋಭಕೃತ್ ಸಂವತ್ಸರ ಆಶ್ವಯುಜ-ಕಾರ್ತಿಕ ಮಾಸ

Volume: 11 Issue: 8 | November 2023 | Pages-8 | Annual Subscription Rs.20/- |

Publisher : **Dr. Ramegowda** - ಪ್ರಕಾಶಕರು : ಡಾ. ರಾಮೇಗೌಡ * Editor : **Dr. Belavadi K. Prabhakar** - ಸಂಪಾದಕರು : ಡಾ. ಬೆಳವಾಡಿ ಕೃ. ಪ್ರಭಾಕರ

ದಿ। ಪ್ರೊ. ಎಂ.ವಿ. ಸೀತಾರಾಮಯ್ಯ
ಸಂಸ್ಥಾಪಕರು
ಡಾ. ಪಿ.ವಿ. ನಾರಾಯಣ
ಗೌರವಾಧ್ಯಕ್ಷರು

ಬಿ.ಎಂ.ಶ್ರೀ. ಪ್ರತಿಷ್ಠಾನ
ಎಂ.ವಿ.ಸಿ.ಇ. ಸ್ನಾತಕೋತ್ತರ ಕೇಂದ್ರ
ಬಿ.ಎಂ.ಶ್ರೀ. ಪ್ರತಿಷ್ಠಾನದ ರಸ್ತೆ
ಪಿನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ
ಬೆಂಗಳೂರು - ೫೬೦೦೦೪
ಮೊಬೈಲ್ : ೯೯೨೨೮೧೧೨೨
ಇ-ಮೇಲ್ : bmsritrust@gmail.com
ಅಂತರ್ಜಾಲ : www.bmshri.org

ಕಛೇರಿ ಸಮಯ
ಬೆಳಿಗ್ಗೆ ೧೦-೩೦ ರಿಂದ ಸಂಜೆ ೫-೩೦
ವಾರದ ರಜೆ : ಭಾನುವಾರ

ಚಂದಾ ವಿವರ
ವಾರ್ಷಿಕ ಚಂದಾ : ರೂ. ೨೦/-
ಐದು ವರ್ಷಗಳ ಚಂದಾ : ರೂ. ೧೦೦/-

ಪದಾಧಿಕಾರಿಗಳು
- ಅಧ್ಯಕ್ಷರು
  ಡಾ. ಬೈರಮಂಗಲ ರಾಮೇಗೌಡ
- ಗೌರವ ಕಾರ್ಯದರ್ಶಿ
  ಡಾ. ಶಾಂತರಾಜು
- ಗೌರವ ಕೋಶಾಧಿಕಾರಿ
  ಡಾ. ಬೆಳವಾಡಿ ಕೃ. ಪ್ರಭಾಕರ

ಸಂಯೋಜನಾಧಿಕಾರಿಗಳು
ಶ್ರೀ ಬಿ.ಎಸ್. ಗುರುಪ್ರಸಾದ್
ಹಸ್ತಪ್ರತಿ ವಿಭಾಗ
ಡಾ. ಚಿತ್ತಯ್ಯ ಪೂಜಾರ್
ಎಂ.ವಿ.ಸಿ.ಇ. ಸಂಶೋಧನಾ ಕೇಂದ್ರ

ಸಂನುಡಿ

ಪ್ರಿಯ ಓದುಗರೇ,

ನವೆಂಬರ್ ಮಾಹೆ ಬಂತೆಂದರೆ ಕರ್ನಾಟಕದಲ್ಲಿ ಎಲ್ಲಿಲ್ಲದ ಉತ್ಸಾಹ. ಅದರಲ್ಲೂ ೨೦೨೩ ನೆಯ ನವೆಂಬರ್ 'ಕರ್ನಾಟಕ' ನಾಮಕರಣ ಆದ ಸುವರ್ಣ ಮಹೋತ್ಸವದ ವರ್ಷವೆಂಬ ಹರ್ಷಕ್ಕೆ ನಾಂದಿ. ಕನ್ನಡದ ಕಹಳೆಯ ಧ್ವನಿ ಇಮ್ಮಡಿಸುವ ಸಮಯ. ಸಾಧನೆಗೆ ಅಂಕುಶವಿಲ್ಲ. ಅದೊಂದು ನಿರಂತರ ಪ್ರಕ್ರಿಯೆ. ಈ ದಿಶೆಯಲ್ಲಿ ಕನ್ನಡದ ಸರ್ವತೋಮುಖ ಅಭಿವೃದ್ಧಿಯಲ್ಲಿ ಬಿ.ಎಂ.ಶ್ರೀ. ಪ್ರತಿಷ್ಠಾನವು ತನ್ನದೇ ಆದ ವಿದ್ವತ್ಪೂರ್ಣ ಅಳಿಲುಸೇವೆಯನ್ನು ಮಾಡುತ್ತಾ ಬಂದಿದೆ. ಈ ಐತಿಹಾಸಿಕ ಸಮಯದಲ್ಲಿ ಪ್ರತಿಷ್ಠಾನವು ಎಲ್ಲಾ ಸಹೃದಯಿಗಳಿಗೂ ಅನಂತಾನಂತ ಹಾರ್ದಿಕ ಶುಭಾಶಯಗಳನ್ನು ಕೋರುತ್ತದೆ.

ಓ ಕರ್ನಾಟಕ ಹೃದಯ ಶಿವ
ಬಾರಿಸು ಕನ್ನಡ ಡಿಂಡಿಮವ
ಬಾ ಹಾಡುತ ಪಾಡುತ ನಾವ್ ಕುಣಿಯುವ.

ಡಾ. ಬೆಳವಾಡಿ ಕೃ. ಪ್ರಭಾಕರ
ಸಂಪಾದಕರು

ಇನ್ನೇನಿನ್ನೇನು

ದಿನಾಂಕ ೨೦-೧೦-೨೦೨೩ ಶುಕ್ರವಾರದಂದು ವಾಡಿಕೆಯಂತೆ ಪ್ರತಿಷ್ಠಾನದಲ್ಲಿ ಸರಸ್ವತಿ, ಲಕ್ಷ್ಮಿ ಹಾಗೂ ಆಯುಧಪೂಜೆ ನಡೆಯಿತು. ಕಾರ್ಯಕಾರಿ ಸಮಿತಿಯ ಹಲವರು, ಸದಸ್ಯರು, ಸಿಬ್ಬಂದಿವರ್ಗ ಹಾಜರಿದ್ದು ಪ್ರಸಾದ ಸ್ವೀಕರಿಸಿದರು. ಅದರ ಒಂದು ನೋಟ.

ಗತ ತಿಂಗಳ ಅಂಗಳ

೩೦-೦೯-೨೦೨೩ ಶನಿವಾರ ಸಂಜೆ ೫-೩೦ ಗಂಟೆಗೆ ನಡೆದ

ಶಂ.ಬಾ. ಜೋಶಿ ದತ್ತಿ ಕಾರ್ಯಕ್ರಮ

ವಿಷಯ : **ಜನಪದ ಸಾಹಿತ್ಯದ ಸೊಬಗು**

ಉಪನ್ಯಾಸಕರು : **ಡಾ. ಮೀರಾಸಾಬಿಹಳ್ಳಿ ಶಿವಣ್ಣ,** ಜಾನಪದ ವಿದ್ವಾಂಸರು, ವಿಶ್ರಾಂತ ಪ್ರಾಧ್ಯಾಪಕರು

ಅಧ್ಯಕ್ಷತೆ : **ಡಾ. ಬೈರಮಂಗಲ ರಾಮೇಗೌಡ**

ಡಾ.ಮೀರಾಸಾಬಿಹಳ್ಳಿ ಮತ್ತು ಡಾ.ಬೈರಮಂಗಲ ರಾಮೇಗೌಡ

ಈ ದಿನದ ಕಾರ್ಯಕ್ರಮ ದತ್ತಿ ನಿಧಿಯ ೨೬ನೇ ವರ್ಷದ ಕಾರ್ಯಕ್ರಮ. ಈ ದತ್ತಿ ನಿಧಿಯ ವೇದಿಕೆಯಲ್ಲಿ ನಾಡಿನ ಹೆಸರಾಂತ ವಿದ್ವಾಂಸರು ಭಾಗವಹಿಸಿ, ಉಪನ್ಯಾಸಗಳನ್ನು ನೀಡಿರುತ್ತಾರೆ ಎಂದು ಹೇಳಿ, ದತ್ತಿ ನಿಧಿಯ ಇತಿಹಾಸವನ್ನು ಸಭೆಗೆ ಹಸ್ತಪ್ರತಿ ಸಂಯೋಜಕರಾದ ಬಿ.ಎಸ್. ಗುರುಪ್ರಸಾದ್ ಪರಿಚಯಿಸಿದರು.

'ಶಂ.ಬಾ. ಜೋಶಿ ವಿಚಾರ ವೇದಿಕೆ'ಯ ಕಾರ್ಯದರ್ಶಿಗಳಾದ ಶ್ರೀ ಶಿವಲಿಂಗಯ್ಯನವರು ಪ್ರತಿಷ್ಠಾನದೊಂದಿಗೆ ೧೯೯೮ ರಿಂದಲೂ ನಿಕಟ ಸಂಪರ್ಕವಿರಿಸಿಕೊಂಡು, ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಲು ನೆರವು ನೀಡಿದ್ದಾರೆ. ಶಂ.ಬಾ. ಅವರ ಅಧ್ಯಕ್ಷತೆಯಲ್ಲೇ ಧಾರವಾಡದಲ್ಲಿ ಅಸ್ತಿತ್ವದಲ್ಲಿದ್ದ 'ಮಾನವಧರ್ಮ ಪ್ರತಿಷ್ಠಾನ'ವೂ ಸಹ, ದತ್ತಿ ನಿಧಿಗೆ ದೇಣಿಗೆ ನೀಡಿದೆ. ಶಂ.ಬಾ. ಅವರ ಅಭಿನಂದನಾ ಸಮಿತಿಯವರು ದತ್ತಿನಿಧಿಯ ಪ್ರಾರಂಭದಲ್ಲಿ ಮೂಲಹಣವಾಗಿ ರೂ. ೭೦೦೦ ನೀಡಿ, ದತ್ತಿನಿಧಿಯನ್ನು ಪೋಷಿಸಿದ್ದಾರೆ. ನಂತರ ಶಂ.ಬಾ. ಅವರ ಪುತ್ರಿ ಡಾ.ವಿಮಲಾ ಮತ್ತು ಪುತ್ರರಾದ ಶ್ರೀ ಮಧುಸೂಧನ ಜೋಶಿಯವರು, ಶಂ.ಬಾ. ಜೋಶಿ ದತ್ತಿ ನಿಧಿಗೆ ತಮ್ಮ ಅಮೂಲ್ಯ ಕೊಡುಗೆಗಳನ್ನು ನೀಡಿ, ಶಂ.ಬಾ. ಅವರ ಹೆಸರನ್ನು ಸಂಶೋಧನಾ ಕ್ಷೇತ್ರದಲ್ಲಿ ಚಿರಸ್ಥಾಯಿಯಾಗಿ ನಿಲ್ಲಿಸಲು ಸಹಾಯ ಮಾಡಿದ್ದಾರೆ. ಸಮಾನ ಪ್ರತಿಭೆಯುಳ್ಳವರಾದ ದ.ರಾ.ಬೇಂದ್ರೆ ಮತ್ತು ಶಂ.ಬಾ. ಜೋಶಿ ಇವರಿಬ್ಬರ ಮಾತೃಭಾಷೆ ಮರಾಠಿ. ಇಬ್ಬರೂ ಧಾರವಾಡದ ಸಾಧನಕೇರಿ ನಿವಾಸಿಗಳೇ. ಭಾವನಾಶೀಲರಾಗಿದ್ದ ಶಂ.ಬಾ. ಅವರು ಸಂಶೋಧನಾ ಕ್ಷೇತ್ರವನ್ನು ಆಯ್ದುಕೊಂಡರೆ, ಹೆಚ್ಚು ಬೌದ್ಧಿಕರಾಗಿದ್ದ ಬೇಂದ್ರೆಯವರು ಕಾವ್ಯವನ್ನು ಆಯ್ದುಕೊಂಡರು. ವಿಚಾರವಾದಿಗಳಾದ ಶಂ.ಬಾ. ಸಂಸ್ಕೃತಿ ಅಧ್ಯಯನ, ಭಾಷಾಶಾಸ್ತ್ರ, ಪುರಾತತ್ವಶಾಸ್ತ್ರ ಅಧ್ಯಯನ, ಇತಿಹಾಸ, ಮನಃಶಾಸ್ತ್ರ, ಜೀವಶಾಸ್ತ್ರ ಇವುಗಳ ಅಧ್ಯಯನಗಳೂ ಸಹ ಒಬ್ಬ ಸಂಶೋಧಕನಿಗೆ ಅವಶ್ಯವೆಂದು ತಮ್ಮ ಹಲವಾರು ಮೌಲಿಕ ಕೃತಿಗಳ ಮೂಲಕ ಪ್ರತಿಪಾದಿಸಿದ್ದಾರೆ. ಶಂ.ಬಾ. ಅವರ 'ಎಡೆಗಳು ಹೇಳುವ ಕಥೆಗಳು' ಕೃತಿಯು ಸ್ಥಳನಾಮ ಅಧ್ಯಯನ ಮಾಡುವ ಯುವ ಪೀಳಿಗೆಗೆ ದೀಪಿಕೆಯಾಗಿದೆ ಎಂದು ಗುರುಪ್ರಸಾದ್ ತಿಳಿಸಿದರು.

ಗೌರವ ಕಾರ್ಯದರ್ಶಿಗಳಾದ ಡಾ. ಶಾಂತರಾಜು ಅವರು ಉಪನ್ಯಾಸಕರನ್ನು ಸಭೆಗೆ ಪರಿಚಯ ಮಾಡಿದರು. ಡಾ. ಮೀರಾಸಾಬಿಹಳ್ಳಿ ಶಿವಣ್ಣನವರ ಕಾರ್ಯಕ್ಷೇತ್ರ ಜಾನಪದ. ಹೆಸರಾಂತ ಜಾನಪದ ವಿದ್ವಾಂಸರ ಪರಿಚಯ ಮಾಡುವ ಯೋಗ ತಮಗೆ ಬಂದುದು ಒಂದು ಹೆಮ್ಮೆಯ ವಿಷಯವೆಂದು, ಅವರ ಸಾಧನೆಗಳನ್ನು ಸಂಕ್ಷಿಪ್ತವಾಗಿ ಸಭೆಗೆ ತಿಳಿಸಿದರು. ಸಭೆಯಲ್ಲಿ ಉಪಸ್ಥಿತರಿದ್ದ ಪ್ರತಿಷ್ಠಾನದ ಗೌರವಾಧ್ಯಕ್ಷರಾದ ಡಾ. ಪಿ.ವಿ. ನಾರಾಯಣ ಅವರನ್ನು, ಕಾರ್ಯಕಾರಿ ಸಮಿತಿ ಸದಸ್ಯರನ್ನು ಮತ್ತು ಆಗಮಿಸಿದ್ದ ಇತರ ವಿದ್ವಾಂಸರನ್ನು, ಪ್ರತಿಷ್ಠಾನದ ಜಾಲತಾಣದ ಮೂಲಕ ಕಾರ್ಯಕ್ರಮದ ನೇರ ಪ್ರಸಾರವನ್ನು ವೀಕ್ಷಿಸುತ್ತಿರುವವರನ್ನು ಸ್ವಾಗತಿಸಿದರು.

ತಮ್ಮ ಉಪನ್ಯಾಸದ ಶೀರ್ಷಿಕೆಯಲ್ಲಿ ಒಂದು ಸಣ್ಣ ಬದಲಾವಣೆಯನ್ನು ಮಾಡುತ್ತಿರುವುದಾಗಿ ತಿಳಿಸಿ, ಯಾಂತ್ರೀಕೃತವಾದ ಇಂದಿನ ದಿನಗಳಲ್ಲಿ ತಾವು 'ಜನಪದ ಸಾಹಿತ್ಯದ ಸೊಬಗು' ಬದಲಿಗೆ ಶೀರ್ಷಿಕೆಯನ್ನು 'ಜನಪದ ಸಾಹಿತ್ಯ : ಅಂದು ಇಂದು' ಎನ್ನುವುದು ಸೂಕ್ತವೆನಿಸುತ್ತದೆ ಎಂದು, ಡಾ. ಮೀರಾಸಾಬಿಹಳ್ಳಿ ಶಿವಣ್ಣಯವರು ತಮ್ಮ ಉಪನ್ಯಾಸವನ್ನು ಪ್ರಾರಂಭಿಸಿದರು.

ಜಾನಪದ ವಿಷಯದ ಬಗ್ಗೆ ಉಪನ್ಯಾಸವಿದ್ದಲ್ಲಿ, ನಗರಗಳಲ್ಲಿ ಸಭಾಂಗಣವು ತುಂಬಿ ತುಳುಕುತ್ತಿದ್ದ ಕಾಲವನ್ನು ಸ್ಮರಿಸಿಕೊಂಡರೆ, ಇಂದು ಯುವಕರು ಇಲ್ಲದ ಈ ಸಭಾಂಗಣದ ಹಾಜರಾತಿ ಅಷ್ಟೇನೂ ಉತ್ಸಾಹ ತರುವಂಥದಲ್ಲವೆಂದು, ಇನ್ನಿತರ ಸಾಹಿತ್ಯಿಕ ಸಂಸ್ಥೆಗಳ ಸ್ಥಿತಿಯೂ ಸಹ ಉತ್ತಮವೇನಲ್ಲವೆಂದು ತಮ್ಮ ಅಭಿಪ್ರಾಯವನ್ನು ಮುಕ್ತವಾಗಿ ತಿಳಿಸಿದರು. ಹೀಗಿದ್ದಾಗ್ಯೂ ಬೆಂಗಳೂರು ಮತ್ತಿತರ ನಗರಗಳು ಹಳ್ಳಿಗಳ, ಜನಪದಗಳ ಗುಡಾಣವಾಗುತ್ತಿರುವುದನ್ನು ನಾವೆಲ್ಲರೂ ಗಮನಿಸುತ್ತಿದ್ದೇವೆ. ಯಾಂತ್ರೀಕೃತ ಬೇಸಾಯ ಪದ್ಧತಿ, ಟಿ.ವಿ., ನಿತ್ಯ ಜೀವನ ನಿರ್ವಹಣೆಯಲ್ಲೂ ವಿಪರೀತ ಮೊಬೈಲ್ ಬಳಕೆ ಮತ್ತು ಮೊಬೈಲ್ ಅವಲಂಬಿತ ಹವಾಮಾನ ವರದಿ ಮುಂತಾದ ಪರಿಕರಗಳು ಜನರನ್ನು ಜಾನಪದದ ವಿವಿಧ ಪ್ರಕಾರಗಳಿಗೆ ತೆರೆದುಕೊಳ್ಳಲು ಅವಕಾಶ ನೀಡುತ್ತಿಲ್ಲ. ಭೌತಿಕ ಜಾನಪದದ ಪ್ರಕಾರಗಳು ಅವಗಣನೆಗೆ ಒಳಗಾಗುತ್ತಿವೆ. ನಗರದ ಜನರಿಗೆ ಮನರಂಜನೆ ಒದಗಿಸುವ ದೃಷ್ಟಿಯಿಂದ ಜಾನಪದ ಮೇಳಗಳು, ತಂಡಗಳು ನಗರಗಳಲ್ಲಿ ಪ್ರದರ್ಶನಗಳನ್ನು ನಡೆಸುತ್ತಿವೆ. ಸರಕಾರದ ಪ್ರೋತ್ಸಾಹವೂ ಲಭಿಸುತ್ತಿದೆ.

ಜಾನಪದ ಅಕಾಡೆಮಿಯೇ ವಿಶೇಷ ಹಬ್ಬಹರಿದಿನಗಳಲ್ಲಿ ಜಾನಪದ ಪ್ರಕಾರಗಳ ತಂಡಗಳನ್ನು ಆಮಂತ್ರಿಸಿ ಪ್ರದರ್ಶನಗಳನ್ನು ಏರ್ಪಡಿಸುವ ವ್ಯವಸ್ಥೆ ನಡೆಸಿಕೊಂಡು ಬರುತ್ತಿದೆ. ಜನಪದ ಎಂದರೆ ಹಳ್ಳಿ. ಜನಪದದಲ್ಲಿ ಇರುವವರು ಜಾನಪದರು. ಜಾನಪದರಿಗೆ ಸಂಬಂಧಿಸಿದ ಸಮಸ್ತ ವಿಷಯಗಳನ್ನು ಜಾನಪದವೆಂದು ಹೇಳಬಹುದು. ಉದಾಹರಣೆಗೆ, ಎತ್ತಿನ ಗಾಡಿಯ ಸಮಗ್ರ ಚಕ್ರವನ್ನು ಜಾನಪದವೆನ್ನಬಹುದು. ಚಕ್ರದ ಆಧಾರ ಕಟ್ಟಿಗೆಗಳು (Spokes) ಜನಪದವೆನಿಸಿಕೊಳ್ಳುತ್ತದೆ. ಶಿಷ್ಟ ಸಾಹಿತ್ಯಕ್ಕೂ ಜನಪದ ಸಾಹಿತ್ಯಕ್ಕೂ ಒಂದು ಪರಂಪರೆ ಇರುತ್ತದೆ. ಶಿಷ್ಟ ಸಾಹಿತ್ಯಕ್ಕೆ ಇತಿಹಾಸವಿದೆ, ಜನಪದ ಸಾಹಿತ್ಯಕ್ಕೆ ಇತಿಹಾಸವಿಲ್ಲ.

ವಿಶ್ವವಿದ್ಯಾಲಯಗಳಲ್ಲಿ ಜನಪದ ಸಾಹಿತ್ಯ ಒಂದು ಕಲಿಕೆಯ ವಿಷಯವಾಗಿದೆ. ಇಲ್ಲಿ ವಿದ್ಯಾರ್ಥಿಗಳಿಗೆ ಜಾನಪದ ಪ್ರಕಾರಗಳನ್ನು ಬೋಧಿಸುವ ವ್ಯವಸ್ಥೆಯಿದೆ. ಕ್ರಮವಾಗಿ ಜಾನಪದ ವಾಚಕ (oral), ವಾಹಕತ್ವ (transmission), ಪರಂಪರೆ (tradition), ಉಳಿಕೆ (survival) ಮತ್ತು ಕೊನೆಯದಾಗಿ ಸಮಷ್ಟಿ, ಅಂದರೆ ಸಾಮೂಹಿಕತೆ ಇವುಗಳನ್ನು ಪಠ್ಯ ವಿಷಯವಾಗಿ ಬೋಧಿಸುತ್ತಾರೆ. ವಿದ್ಯಾರ್ಥಿಗಳು ಈ ಕ್ಷೇತ್ರದಲ್ಲಿ ಸಂಶೋಧನೆಯಲ್ಲಿ ತೊಡಗಿಸಿಕೊಳ್ಳುತ್ತಿದ್ದಾರೆ. ಕರ್ನಾಟಕ ಜಾನಪದ ವಿಶ್ವವಿದ್ಯಾಲಯವು ಹಾವೇರಿ ಜಿಲ್ಲೆಯ ಶಿಗ್ಗಾವಿ ತಾಲ್ಲೂಕಿನ ಗೊಟಗೋಡಿಯಲ್ಲಿ

ತನ್ನ ವಸ್ತು ಸಂಗ್ರಹಾಲಯವನ್ನು ಹೊಂದಿದೆ. ವಿದ್ಯಾರ್ಥಿಗಳಿಗೆ ಪ್ರಯೋಗಶಾಲೆಯಾಗಿ ಜಾನಪದ ವಸ್ತುಸಂಗ್ರಹಾಲಯವೆಂಬ ಮನ್ನಣೆ ಪಡೆದಿದೆ. ಉನ್ನತ ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯದಲ್ಲೂ ಸಹ ಜಾನಪದ ಸಂಗ್ರಹಾಲಯವಿದೆ. ಇಲ್ಲೂ ಸಹ ಸಾರ್ವಜನಿಕರು ಸಂಗ್ರಹಾಲಯಕ್ಕೆ ಭೇಟಿನೀಡುವ ವ್ಯವಸ್ಥೆಯಿದೆ. ಇದಲ್ಲದೆ ಜಾನಪದ ವಿದ್ವಾಂಸ ಡಾ. ನಾಗೇಗೌಡ ಎಚ್.ಎಲ್. ಅವರು ಜಾನಪದ ಪರಿಕರಗಳ 'ಜಾನಪದ ಲೋಕ'ವೆಂಬ ಸಂಗ್ರಹಾಲಯವನ್ನು ರಾಮನಗರದ ಸಮೀಪ ತೆರೆದಿದ್ದು, ಇದು ವಿದ್ಯಾರ್ಥಿಗಳಿಗೆ ಪ್ರಯೋಗಶಾಲೆಯಾಗಿಯೂ ಕಾರ್ಯನಿರ್ವಹಿಸುತ್ತಿರುವ ಮಾಹಿತಿ ನೀಡಿದರು.

ಜನಪದ ಸಾಹಿತ್ಯವು ವಾಙ್ಮಯ ರೂಪದ ಜಾನಪದ (Folklore). ಇದರಲ್ಲಿನ ಮುಖ್ಯ ವಿಭಾಗಗಳೆಂದರೆ –ಕಥೆಗಳು, ಗೀತೆಗಳು, ಗಾದೆಗಳು, ಒಗಟುಗಳು. ಜನಪದ ಗೀತೆಗಳು (Folk songs) ಇದನ್ನು ಐದು ಭಾಗಗಳಾಗಿ ವಿಂಗಡಿಸಿದೆ. ಅವುಗಳು ಐತಿಹ್ಯ (Legend), ಕಿನ್ನರ ಕಥೆಗಳು (tiny tales) ಪ್ರಾಣಿಗಳಿಗೆ ಸಂಬಂಧಿಸಿದ ಕಥೆಗಳು, ನೀತಿಕಥೆಗಳು (Fables) ಮತ್ತು ಪುರಾಣ ಕಥೆಗಳು (Myths). ಜಾನಪದವೊಂದು ಪ್ರಾಚೀನ ಬ್ರಹ್ಮಾಂಡವಿದ್ದಂತೆ. ಜನಪದ ಭಾಷೆ, ಜನಪದ ಕಲೆ, ಜನಪದ ವಿಜ್ಞಾನ, ಜನಪದ ಪರಿಕರಗಳು ಮುಂತಾದ ಅಧ್ಯಯನಯೋಗ್ಯ ಜ್ಞಾನನಿಧಿ ಮತ್ತು ಸಂಸ್ಕೃತಿಯ ನಿಧಿ ಎಂದು ವಿವರಿಸಿದರು.

ಕೊನೆಯಲ್ಲಿ ಸಂವಾದ ಕಾರ್ಯಕ್ರಮವೂ ಜರುಗಿದ್ದು ವಿಶೇಷವೆನಿಸಿತು. ಕೇಳುಗರ ಪ್ರಶ್ನೆಗಳಿಗೆ ಶಿವಣ್ಣನವರು ಸಮಾಧಾನದಿಂದ ಉತ್ತರಿಸಿ, ಇನ್ನೂ ಹೆಚ್ಚಿನ ಮಾಹಿತಿಗಳನ್ನು ನೀಡಿ, ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಜಾನಪದ ಅಕಾಡೆಮಿ ಮತ್ತು ಇನ್ನಿತರ ಜಾನಪದ ಕಲಾ ಸಂಸ್ಥೆಗಳು ನಗರಗಳಲ್ಲಿ ಹಬ್ಬಹರಿದಿನಗಳಲ್ಲಿ ಮತ್ತು ನಾಡು ಆಚರಿಸುವಂತಹ ದೊಡ್ಡ ಸಮಾರಂಭಗಳಲ್ಲಿ ವಿವಿಧ ಜನಪದ ಮೇಳಗಳನ್ನು ಆಯೋಜಿಸಿ, ಜನಪದರನ್ನು ಜಾನಪದ ಮೂಲದತ್ತ ಹೊರಳುವ ಅವಕಾಶಗಳನ್ನು ಕಲ್ಪಿಸುತ್ತಿದೆ. ಕೆಲವು ಕಾಲೇಜುಗಳಲ್ಲಿ ವಿದ್ಯಾರ್ಥಿಗಳೇ ಸ್ವಯಂ ಪ್ರೇರಣೆಗೊಂಡು ಕೆಲವು ಜನಪದ ಆಟ, ಕುಣಿತಗಳನ್ನು ಕಲಿತು ಪ್ರದರ್ಶನಗಳನ್ನು ನೀಡುತ್ತಿದ್ದಾರೆ. ಇದೊಂದು ಉತ್ತಮ ಬೆಳವಣಿಗೆ. ಸಿರಿಧಾನ್ಯ ಮೇಳಗಳು, ಸಾವಯವ ತರಕಾರಿ ಮಾರಾಟ ಮಳಿಗೆಗಳು, ಸೂತ್ರದ ಗೊಂಬೆ ಆಟಗಳ ಪ್ರದರ್ಶನ, ಕೋಲಾಟಗಳು, ಮಂಟೇಸ್ವಾಮಿ ಕಥಾಪ್ರಸಂಗ, ಜುಂಜಪ್ಪನ ಕಥಾ ಪ್ರಸಂಗ, ಮಲೆಮಾದೇಶ್ವರ ಸ್ವಾಮಿಯ ಕಾವ್ಯವನ್ನು ಕುಣಿತದವರೊಂದಿಗೆ ಪ್ರಸ್ತುತ ಪಡಿಸುವ ತಂಡಗಳು ನಗರವಾಸಿಗಳಿಗೆ ಮನರಂಜನೆಯಲ್ಲದೆ, ಜಾನಪದ ಜ್ಞಾನವನ್ನು ಪರಿಚಯಿಸುತ್ತವೆ. ಜುಂಜಪ್ಪನ ಕಾವ್ಯ ಪಶುಪಾಲನೆಯ ವಿಷಯಗಳನ್ನು ತಿಳಿಸುತ್ತದೆ. ಗಾಂಧಿ ಕಥನವನ್ನು ಬಿಂಬಿಸುವ ಗೊಂಬೆಯಾಟಗಳ ಪ್ರದರ್ಶನವೂ ಇವೆ. ಕಾಲ ಬದಲಾದಂತೆ ಪ್ರಸಂಗಗಳಲ್ಲಿ ಮಾರ್ಪಾಡು, ಬದಲಾವಣೆ ಮತ್ತು ಪ್ರಸ್ತುತ ವಿದ್ಯಮಾನಗಳನ್ನು ಅಳವಡಿಸಿಕೊಂಡು ಜನರನ್ನು ಜಾನಪದದತ್ತ ಸೆಳೆಯುತ್ತದೆ. "ಮರಳಿ ಮಣ್ಣಿಗೆ, ಹೊರಳಿ ಜಾನಪದದತ್ತ" ಧ್ಯೇಯ ವಾಕ್ಯವಾಗಬೇಕು. ಜಾನಪದ ಮರೆತುಹೋದ ಕಲೆಯಾಗದೆ, ಶಾಶ್ವತವಾಗಿ ಮುಂದಿನ ಪೀಳಿಗೆಗಳಿಗೂ ತಲುಪಿಸುವ ನಿಟ್ಟಿನಲ್ಲಿ ಜಾನಪದ ಅಕಾಡೆಮಿಯ ಕಾರ್ಯ ನಿರ್ವಹಿಸುತ್ತಿದೆ ಎಂದು ಅಧ್ಯಕ್ಷತೆ ವಹಿಸಿದ್ದ ಡಾ. ಬೈರಮಂಗಲ ರಾಮೇಗೌಡರು, ಉಪನ್ಯಾಸದ ವಿಷಯದ ವಿಶಾಲತೆಯನ್ನು ಗಮನದಲ್ಲಿರಿಸಿಕೊಂಡು, ಉಪನ್ಯಾಸಕರಿಗೆ ವಿಷಯದ ಆಯ್ಕೆ ಮತ್ತು ಈ ಜ್ಞಾನಶಾಖೆಯ ಸಮಷ್ಟಿ ಚಿತ್ರಣವನ್ನು ಸಂಕ್ಷಿಪ್ತವಾಗಿ ತಿಳಿಸಿಕೊಡುವ ಸ್ವಾತಂತ್ರ್ಯವನ್ನು ನೀಡಿದ್ದು, ಕಾರ್ಯಕ್ರಮ ಯಶಸ್ವಿಯಾಗಲು ಕಾರಣವಾಯಿತೆಂದು ಅಭಿಪ್ರಾಯ ವ್ಯಕ್ತಪಡಿಸಿದರು. ಪ್ರತಿಷ್ಠಾನದ ಮಾಜಿ ಅಧ್ಯಕ್ಷರಾದ ದಿವಂಗತ ಡಿ.ಲಿಂಗಯ್ಯ ಅವರು ಸ್ವತಃ ಜಾನಪದ ವಿದ್ವಾಂಸರು. ಅವರ ಸ್ಥಳನಾಮಗಳ ಕೃತಿಗಳು ಆಕರ ಗ್ರಂಥಗಳಾಗಿವೆ ಎಂದು ಹೇಳಿ ತಮ್ಮ ವಿದ್ಯಾರ್ಥಿ ದೆಸೆಯಲ್ಲಿ ಜನಪದ ಮೇಳಗಳಲ್ಲಿ ಭಾಗವಹಿಸಿದ ದಿನಗಳನ್ನು ನೆನಪಿಸಿಕೊಂಡರು. ಬಿ.ಎಂ.ಶ್ರೀ. ಅವರೂ ಸಹ ತಮ್ಮ ಬರವಣಿಗೆಗಳಲ್ಲಿ ಜನಪದ ಸಾಹಿತ್ಯದ ಕೊಡುಗೆಯ ಬಗ್ಗೆ ಪ್ರಸ್ತಾಪಿಸಿದ್ದಾರೆ. ಕರ್ನಾಟಕವಲ್ಲದೆ ಇಡೀ ದೇಶದಲ್ಲೂ ಇತರ ರಾಜ್ಯಗಳಲ್ಲಿರುವ ವಿಶ್ವವಿದ್ಯಾಲಯಗಳಲ್ಲೂ ಜಾನಪದವನ್ನು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಪಠ್ಯವಿಷಯವಾಗಿ ಬೋಧಿಸುತ್ತಿರುವುದಾಗಿ ತಿಳಿಸಿದರು. ಪಟ್ಟಣದ ಯಾಂತ್ರಿಕ ಬದುಕು ನೀರಸವಾಗಿ ಕಂಡುಬಂದರೆ, ಜನರು ಹೊರಳುವುದೇ ಜಾನಪದದ ಕಡೆಗೆ. ಜಾನಪದ ಮಹಾಭಾರತದ ಕರ್ತೃ ಡಾ. ಪಿ.ಕೆ. ರಾಜಶೇಖರ ಅವರ ಕೊಡುಗೆ, ಅವರ ಕಾರ್ಯಕ್ಷೇತ್ರದ ವ್ಯಾಪ್ತಿ, ಕಾರ್ಯಕ್ಷಮತೆ ಬಗ್ಗೆ ಬದ್ಧತೆ ಮತ್ತು ನಿಷ್ಠೆಯನ್ನು ಬಿಂಬಿಸುತ್ತದೆ ಎಂದು ತಿಳಿಸಿದರು. ಕೊನೆಯಲ್ಲಿ ಉಪನ್ಯಾಸಕರಿಗೆ ಮತ್ತು ಸಂವಾದದಲ್ಲಿ ಭಾಗಹಿಸಿದ ವಿದ್ವಾಂಸರೆಲ್ಲರಿಗೂ ವಂದನೆ ಸಲ್ಲಿಸಿದರು.

ಗತ ತಿಂಗಳ ಅಂಗಳ

೦೮-೧೦-೨೦೨೩ ಭಾನುವಾರ ಬೆಳಗ್ಗೆ ೧೧-೦೦ ಗಂಟೆಗೆ ನಡೆದ

ಡಾ. ಕೆ. ರಾಜೇಶ್ವರಿ ದೊಡ್ಡರಂಗೇಗೌಡ ಸ್ಮಾರಕ ದತ್ತಿ ಕಾರ್ಯಕ್ರಮ

'ಡಾ. ಕೆ. ರಾಜೇಶ್ವರಿ ಗೌಡ ಅವರ ಕಥಾಸಾಹಿತ್ಯದ ಒಳನೋಟ' ಕುರಿತು ಉಪನ್ಯಾಸ

ಶ್ರೀ ಲಕ್ಷ್ಮಣ ಕೊಡಸೆ, ಸಾಹಿತಿ, ಹಿರಿಯ ಪತ್ರಕರ್ತರು

ಉಪಸ್ಥಿತಿ: ಡಾ. ದೊಡ್ಡರಂಗೇಗೌಡ, ಪ್ರಸಿದ್ಧ ಕವಿ ಮತ್ತು ಚಲನಚಿತ್ರ ನಿರ್ದೇಶಕರು

ಅಧ್ಯಕ್ಷತೆ: ಡಾ. ಎಚ್.ಎಸ್.ಎಂ.ಪ್ರಕಾಶ್, ಖ್ಯಾತ ಭೂ ವಿಜ್ಞಾನಿ, ಬಿಎಂಶ್ರೀ. ಪ್ರತಿಷ್ಠಾನದ ಕಾರ್ಯಕಾರಿ ಸಮಿತಿ ಸದಸ್ಯರು

ಹಾಗೂ

ಡಾ. ಕೆ. ರಾಜೇಶ್ವರಿ ಗೌಡ ಅವರ 'ನಿರ್ಣಯ' ಕಥಾ ಸಂಕಲನ ೩ನೇ ಆವೃತ್ತಿ ಲೋಕಾರ್ಪಣೆ

ಡಾ.ಕೆ.ಆರ್. ಸಂಧ್ಯಾರೆಡ್ಡಿ, ಸಾಹಿತಿ, ಜಾನಪದ ವಿದ್ವಾಂಸರು

ಶ್ರೀಮತಿ ಸುಮಲತಾ ಅವರ ನಾಡಗೀತೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ದತ್ತಿನಿಧಿಯ ಆಶೋತ್ತರಗಳನ್ನು ಹಸ್ತಪ್ರತಿ ಸಂಯೋಜನಾಧಿಕಾರಿಗಳಾದ ಶ್ರೀ ಬಿ.ಎಸ್.ಗುರುಪ್ರಸಾದ್ ಅವರು ಸಭೆಗೆ ತಿಳಿಸಿದರು. ಪ್ರತಿಷ್ಠಾನದ ಸಂಸ್ಥಾಪಕರಾದ ಪ್ರೊ.ಎಂ.ವಿ.ಸೀತಾರಾಮಯ್ಯನವರು ಪ್ರೊ.ದೊಡ್ಡರಂಗೇಗೌಡರ ಗುರುಗಳು. ಪ್ರತಿಷ್ಠಾನದ ಸಾಹಿತ್ಯಿಕ ಮತ್ತು ವಿದ್ವತ್‌ವಲಯದಲ್ಲಿನ ಬೆಳವಣಿಗೆಯನ್ನು ಗಮನಿಸುತ್ತಿದ್ದ ಶ್ರೀ ದೊಡ್ಡರಂಗೇಗೌಡರು ತಮ್ಮ ಬಾಳಸಂಗಾತಿಯಾಗಿದ್ದ ಡಾ.ಕೆ. ರಾಜೇಶ್ವರಿ ಗೌಡ ಅವರ ಸ್ಮರಣಾರ್ಥ ಒಂದು ದತ್ತಿನಿಧಿಯನ್ನು ಸೆಪ್ಟೆಂಬರ್ ೨೦೨೦ರಲ್ಲಿ

ಸ್ಥಾಪಿಸಿದ್ದಾರೆ. ಇದು ದತ್ತಿನಿಧಿಯ ನಾಲ್ಕನೇ ವರ್ಷದ ಕಾರ್ಯಕ್ರಮವಾಗಿದೆ. ಸೃಜನಶೀಲ ಸಾಹಿತ್ಯದಲ್ಲಿ ಯಾವುದಾದರೊಂದು ಪ್ರಕಾರವನ್ನು ಅಥವಾ ಡಾ.ರಾಜೇಶ್ವರಿ ಗೌಡ ಅವರ ಹದಿನಾಲ್ಕು ಕೃತಿಗಳಲ್ಲಿ ಯಾವುದಾದರೊಂದು ಕೃತಿಯನ್ನು ಕುರಿತು ಉಪನ್ಯಾಸವನ್ನು ಏರ್ಪಡಿಸಬಹುದೆಂದು, ದತ್ತಿ ನಿಧಿಯ ಆಶಯವನ್ನು ನಮ್ಮಲ್ಲಿ ಸ್ಪಷ್ಟಪಡಿಸಿದ್ದಾರೆ ಎಂದು ಹಿನ್ನೋಟವನ್ನು ಕೊಟ್ಟರು.

ಪ್ರತಿಷ್ಠಾನದ ಕಾರ್ಯದರ್ಶಿಗಳಾದ ಡಾ.ಶಾಂತರಾಜು ಅವರು ಜಾನಪದ ವಿದ್ವಾಂಸರಾದ ಡಾ. ಸಂಧ್ಯಾರೆಡ್ಡಿ, ಸಾಹಿತಿ ಹಾಗೂ ಪತ್ರಕರ್ತರಾದ ಲಕ್ಷ್ಮಣ ಕೊಡಸೆಯವರ ಪರಿಚಯವನ್ನು ಸಭೆಗೆ ಮಾಡಿಕೊಟ್ಟರು. ಕಾರ್ಯಕಾರಿ ಸಮಿತಿ ಸದಸ್ಯರಾದ ಡಾ.ಎಚ್.ಎಸ್.ಎಂ. ಪ್ರಕಾಶ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ನಿರ್ವಹಿಸಬೇಕೆಂಬ ಕೋರಿಕೆಯನ್ನು ಮನ್ನಿಸಿ ಅವರು ಆಗಮಿಸಿದ್ದಾರೆ. ಇವರು ವೃತ್ತಿಯಲ್ಲಿ ಭೂವಿಜ್ಞಾನಿ. ಪ್ರವೃತ್ತಿಯಲ್ಲಿ ಹೆಸರಾಂತ ಭಾಷಾಂತಕಾರರಾಗಿ ಸಾಹಿತ್ಯವಲಯದಲ್ಲಿ ಪರಿಚಿತರು. ಇಂದು ಲೋಕಾರ್ಪಣೆಗೊಳ್ಳುತ್ತಿರುವ ಡಾ.ಕೆ.ರಾಜೇಶ್ವರಿ ಗೌಡ ಅವರ 'ನಿರ್ಣಯ' ಪುಸ್ತಕವನ್ನು ೨೦೨೧ರಲ್ಲೇ ಇಂಗ್ಲಿಷ್ ಭಾಷೆಗೆ ಭಾಷಾಂತರಿಸಿದ್ದಾರೆ ಎಂದರು. ವೇದಿಕೆಯ ಗಣ್ಯರನ್ನು ಸಭೆಗೆ ಪರಿಚಯಿಸಿದ ನಂತರ ಕಾರ್ಯಕ್ರಮಕ್ಕೆ ಆಗಮಿಸಿರುವ ದತ್ತಿದಾನಿಗಳ ಕುಟುಂಬ ವರ್ಗದವರನ್ನು, ಹಿತೈಷಿಗಳನ್ನು, ಶ್ರೀಮತಿ ರಾಜೇಶ್ವರಿಗೌಡ ಅವರ ವಿದ್ಯಾರ್ಥಿಗಳನ್ನು, ಸಹೋದ್ಯೋಗಿಗಳನ್ನು ಮತ್ತು ಜಾಲತಾಣದ ಮೂಲಕ ಕಾರ್ಯಕ್ರಮ ವೀಕ್ಷಿಸುತ್ತಿರುವವರನ್ನು ಕಾರ್ಯಕ್ರಮಕ್ಕೆ ಸ್ವಾಗತಿಸಿದರು.

ನಂತರ ಶ್ರೀಮತಿ ರಾಜೇಶ್ವರಿ ಅವರ ಛಾಯಾಚಿತ್ರಕ್ಕೆ ದೀಪ ಬೆಳಗಿಸಿ, ಪುಷ್ಪವನ್ನರ್ಪಿಸಲಾಯಿತು. ಸುಮಲತಾ ಅವರು ಡಾ.ದೊಡ್ಡರಂಗೇಗೌಡರ ಭಾವಗೀತೆಯನ್ನು ಪ್ರಸ್ತುತ ಪಡಿಸಿದರು.

ಹಿರಿಯ ಪತ್ರಕರ್ತರಾದ ಶ್ರೀ ಲಕ್ಷ್ಮಣ ಕೊಡಸೆಯವರು ಮಾತನಾಡುತ್ತಾ ಶ್ರೀಮತಿ ರಾಜೇಶ್ವರಿ ಗೌಡ ಮತ್ತು ಪ್ರೊ.ದೊಡ್ಡರಂಗೇಗೌಡ ಅವರೊಂದಿಗಿನ ತಮ್ಮ ಸೆಂಟ್ರಲ್ ಕಾಲೇಜಿನ ದಿನಗಳು, ಸಾಹಿತ್ಯಿಕ ಚಟುವಟಿಕೆಗಳಲ್ಲಿ ಭಾಗವಹಿಸಲು ಪ್ರಾಧ್ಯಾಪಕರುಗಳು ನೀಡುತ್ತಿದ್ದ ಸಲಹೆ, ಸೂಚನೆ ಮತ್ತು ಉತ್ತೇಜನವನ್ನು ನೆನಪಿಸಿಕೊಂಡು ಭಾವುಕರಾದರು. ಅವರು ಬರೆದದ್ದು ಕಡಿಮೆಯಾದರೂ, ಅವರ ಬರಹಗಳಲ್ಲಿ ಮಾನವ ಸಂಬಂಧಗಳಿಗೆ ಬೆಲೆ ಕಟ್ಟುವ, ಸ್ತ್ರೀಪರ ವಿಚಾರಧಾರೆಗಳನ್ನು ತಿಳಿಸುವ ರೀತಿ, ಕನ್ನಡ ಸಾಹಿತ್ಯಕ್ಷೇತ್ರಕ್ಕೆ ಒಂದು ಅಮೂಲ್ಯವಾದ ಕೊಡುಗೆ. ವಿದ್ಯಾರ್ಥಿದೆಸೆಯಿಂದಲೂ ಆಗಾಗ ಬಿಡಿ ಬರಹಗಳನ್ನು, ಕವನಗಳನ್ನು ಬರೆಯುತ್ತಿದ್ದರು. ನಂತರ ಅವರು ಪ್ರಾಧ್ಯಾಪಕ ವೃತ್ತಿಯಲ್ಲಿದ್ದುಕೊಂಡು ಕಥೆಗಳು, ಕಾದಂಬರಿಗಳನ್ನು ಬರೆದು, ಲೇಖಕರೆಂದು ಗುರುತಿಸಿಕೊಂಡಿದ್ದರು. ಅವರ ಕವನಗಳು ಅರ್ಥಪೂರ್ಣವಾಗಿವೆ. ಇವರು ಆಧುನಿಕ ವಚನಗಳನ್ನು ರಚಿಸಿ 'ವಚನಾಂಜಲಿ' ಎಂಬ ಶೀರ್ಷಿಕೆಯಡಿ ಪ್ರಕಟಿಸಿದ್ದಾರೆ. ಎರಡು ಪ್ರವಾಸ ಕಥನಗಳನ್ನೂ ಪ್ರಕಟಿಸಿದ್ದಾರೆ. 'ಆದಿಚುಂಚನಗಿರಿ ಒಂದು ಸಾಂಸ್ಕೃತಿಕ ಅಧ್ಯಯನ'ವೇ ಇವರ ಮಹಾಪ್ರಬಂಧ ಎಂದು ಕೆ. ರಾಜೇಶ್ವರಿ ಗೌಡರವರ ಸಾಹಿತ್ಯದ ಒಳನೋಟವನ್ನು ತೆರೆದಿಟ್ಟರು.

ಇದೇ ಸಂದರ್ಭದಲ್ಲಿ ಡಾ.ಕೆ. ರಾಜೇಶ್ವರಿ ಗೌಡ ಅವರ 'ನಿರ್ಣಯ' ಕಥಾ ಸಂಕಲನ ಲೋಕಾರ್ಪಣೆಯನ್ನು ಡಾ.ಕೆ. ಆರ್. ಸಂಧ್ಯಾರೆಡ್ಡಿ ಅವರು ಮಾಡಿದರು. ಈ ಪುಸ್ತಕದ ಮೂರನೇ ಆವೃತ್ತಿಯನ್ನು ಲೋಕಾರ್ಪಣೆ ಮಾಡಲು ಬಹಳ ಸಂತೋಷವಾಗುತ್ತಿದೆ ಎಂದು ಹೇಳುತ್ತಾ ಈ ಸಂದರ್ಭದಲ್ಲಿ ತಮ್ಮ ಹೃದಯದಾಳದ ಮಾತುಗಳನ್ನಾಡಿದರು. ಡಾ.ಕೆ. ರಾಜೇಶ್ವರಿ ಗೌಡ ಅವರು ತಮ್ಮ ಉಪನ್ಯಾಸ ವೃತ್ತಿಯನ್ನು ಬಹು ನಿಷ್ಠೆಯಿಂದ ಮತ್ತು ಶಿಸ್ತಿನಿಂದ ಪರಿಪಾಲಿಸುತ್ತಿದ್ದ ಕಾರಣದಿಂದಾಗಿ ಅವರ ಬರಹ ಬಹಳ

ಎಡದಿಂದ ಬಲಕ್ಕೆ ಡಾ.ಶಾಂತರಾಜು, ಲಕ್ಷ್ಮಣ ಕೊಡಸೆ, ಡಾ.ದೊಡ್ಡರಂಗೇಗೌಡ, ಡಾ.ಎಚ್.ಎಸ್.ಎಂ.ಪ್ರಕಾಶ್, ಡಾ.ಕೆ.ಆರ್. ಸಂಧ್ಯಾರೆಡ್ಡಿ.

ಕಡಿಮೆ. ಆದರೆ ಬರೆದ ಕೃತಿಗಳೆಲ್ಲವೂ ಮೌಲ್ಯಯುತ ಕೃತಿಗಳು. ಹಲವಾರು ಕಾದಾಟದ ಪ್ರಸಂಗಗಳ ಮತ್ತು ವೀರರ ಶೌರ್ಯವನ್ನು ಚಿತ್ರಿಸಿರುವ ವೀರಗಲ್ಲುಗಳು, ಮಾಸ್ತಿಕಲ್ಲುಗಳು ಇವರಿಗೆ ಕಥಾವಸ್ತುವಾಗಿ ರೂಪಾಂತರಗೊಂಡು 'ಪ್ರತಿಷ್ಠೆ', 'ಅರ್ಪಣೆ', 'ನಿರ್ಣಯ', 'ಸೆರೆಯಾಳಿನ ಸೇಡು' ಎಂಬ ಕಥೆಗಳಾಗಿ ಇವುಗಳಲ್ಲಿ ಐತಿಹಾಸಿಕ ಸಂಗತಿಗಳನ್ನು ಕಾಣಬಹುದು. ಇದೊಂದು ಉದಾಹರಣೆ ಅಷ್ಟೆ. ಕಥಾವಸ್ತು ಯಾವ ಕಾಲದ್ದಾದರೂ ಸರಿ, ಆ ಕಾಲಘಟ್ಟದ ಜೀವನ ಮೌಲ್ಯಗಳನ್ನು ಅರಿತು ಬರೆದ ಅವರ ಕಥೆಗಳು ಓದುಗರಿಂದ ಬಹಳ ಮೆಚ್ಚುಗೆ ಪಡೆದಿವೆ. ಇದಕ್ಕೆ ಸಾಕ್ಷಿ 'ನಿರ್ಣಯ' ಕಥಾ ಸಂಕಲನ. ಮೂರು ಮುದ್ರಣಗಳನ್ನು ಕಂಡಿದೆ. ರಾಜೇಶ್ವರಿ ಗೌಡ ತಮಗೆ ಬಹಳ ಆಪ್ತರು. ತಮ್ಮ ಕಥೆ, ಕವನಗಳ ಮೂಲಕ ಮಹಿಳೆ, ಲೇಖಕಿಯರ ಸಮೂಹದಲ್ಲಿ ತಮ್ಮ ಹೆಜ್ಜೆಯನ್ನು ಮೂಡಿಸಿದ್ದಾರೆಂದು ಅಭಿಪ್ರಾಯಪಟ್ಟರು.

ಕೃತಜ್ಞತಾಪೂರ್ವಕವಾಗಿ ಮಾತನಾಡಿದ ಪ್ರೊ.ದೊಡ್ಡರಂಗೇಗೌಡರು, ತಾವು ಪ್ರತಿಷ್ಠಾನದಲ್ಲಿ ಕಾರ್ಯಕಾರಿ ಸಮಿತಿ ಸದಸ್ಯನಾಗಿ ಕಾರ್ಯನಿರ್ವಹಿಸಿದ ದಿನಗಳನ್ನು, ಲೋಚನ ವಿದ್ವತ್ ಪತ್ರಿಕೆಯ ಸಂಪಾದಕನಾಗಿದ್ದ ಅನುಭವಗಳನ್ನು ನೆನಪಿಸಿಕೊಂಡರು. ರಾಜೇಶ್ವರಿ ಗೌಡ ತಮಗೆ ಆದರ್ಶ ಗೆಳತಿ, ಆದರ್ಶ ಗೃಹಿಣಿ, ಜವಾಬ್ದಾರಿಯುತ ತಾಯಿ ಮತ್ತು ಸೃಜನಶೀಲ ಬರಹಗಾರ್ತಿಯಾಗಿಯೂ ಇದ್ದು ತನ್ನೆಲ್ಲಾ ಜವಾಬ್ದಾರಿಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದನ್ನು ತಾನು ಅನುಭವಿಸಿದ್ದೇನೆ. ಬಿ.ಎಂ.ಎಸ್. ಮಹಿಳಾ ಮಹಾವಿದ್ಯಾಲಯದಲ್ಲೂ ಉತ್ತಮ ಪ್ರಾಧ್ಯಾಪಕಿಯಾಗಿ ಮತ್ತು ಪಿಎಚ್.ಡಿ. ಮಾರ್ಗದರ್ಶಕರಾಗಿಯೂ ಅಧ್ಯಾಪನವನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾಳೆ. ದುಃಖ ಉಮ್ಮಳಿಸಿ ಬರುತ್ತಿದ್ದು ಹಳೇ ನೆನಪುಗಳು ಕಾಡುವುದರಿಂದ ಮಾತನಾಡುವುದು ಕಷ್ಟವೆಂದರು. ಪ್ರತಿಷ್ಠಾನವು ದತ್ತಿ ನಿಧಿಯ ಕಾರ್ಯಕ್ರಮವನ್ನು ಸಮರ್ಪಕವಾಗಿ ನಡೆಸಿಕೊಡುತ್ತಿರುವುದನ್ನು ಮೆಚ್ಚಿದರು. ಯಾವ ಲೋಪವಿಲ್ಲದೆ, ಎಲ್ಲಾ ಕಾರ್ಯಕ್ರಮಗಳನ್ನು ಕ್ರಮಬದ್ಧವಾಗಿ ನಡೆಸಿಕೊಟ್ಟ ಆಡಳಿತವರ್ಗಕ್ಕೂ, ಸಿಬ್ಬಂದಿವರ್ಗಕ್ಕೂ ತಮ್ಮ ಮೆಚ್ಚುಗೆಯನ್ನು ಸೂಚಿಸಿದರು.

ಅಧ್ಯಕ್ಷೀಯ ನುಡಿಗಳನ್ನಾಡಿದ ಡಾ.ಎಚ್.ಎಸ್.ಎಂ.ಪ್ರಕಾಶ್ ಅವರು ತಾವು ಪ್ರವೃತ್ತಿಯಿಂದ ಸಾಹಿತಿ ಸಮಾರಂಭದ ಅಧ್ಯಕ್ಷನಾಗಿ ಮಾತನಾಡುತ್ತಿರುವ ಮೊದಲ ಅನುಭವವೆಂದರು. ರಾಜೇಶ್ವರಿ ಗೌಡರ ಕಥಾ ಸಂಕಲನ 'ನಿರ್ಣಯ'ವನ್ನು ತಾವು ೨೦೨೧ರಲ್ಲಿ ಭಾಷಾಂತರಿಸಿ 'Decision' ಎಂಬ ಹೆಸರಿನಲ್ಲಿ ಪ್ರಕಟಿಸಿರುವುದಾಗಿ ತಿಳಿಸಿದರು. ಆ ಪುಸ್ತಕವೂ ಇದೇ ದತ್ತಿ ನಿಧಿಯ ಕಾರ್ಯಕ್ರಮದಲ್ಲೇ ೨೦೨೧ರಲ್ಲಿ ಬಿಡುಗಡೆಗೊಂಡಿರುವುದನ್ನು ಸ್ಮರಿಸಿಕೊಂಡರು.

ಪ್ರೊ.ದೊಡ್ಡರಂಗೇಗೌಡರ ಸುಪುತ್ರರಾದ ಡಾ.ಭರತ್ ಗೌಡ ಅವರು ವಂದನಾರ್ಪಣೆ ಸಲ್ಲಿಸಿ ವಿಶೇಷ ಆಹ್ವಾನಿತರಿಗೆ ಸ್ಮರಣಿಕೆಗಳನ್ನು ನೀಡಿ ಗೌರವಿಸಿದರು.

ಗತ ತಿಂಗಳ ಅಂಗಳ

೧೬-೧೦-೨೦೨೩ ಸೋಮವಾರ ಸಂಜೆ ೫-೦೦ ಗಂಟೆಗೆ

ಶ್ರೀ ಎಂ.ಎ. ರಾಮಾನುಜ ಅಯ್ಯಂಗಾರ್ ದತ್ತಿ ಕಾರ್ಯಕ್ರಮ

ವಿಷಯ : **ಮಹಾಭಾರತದ ದ್ರೋಣಾಚಾರ್ಯ – ಪ್ರಸ್ತುತತೆ**

ಉಪನ್ಯಾಸಕರು : **ಡಾ.ಎಸ್. ಅನಿಲ್‌ಕುಮಾರ್,** ವಾಣಿಜ್ಯಶಾಸ್ತ್ರ ಪ್ರಾಧ್ಯಾಪಕರು

ಅಧ್ಯಕ್ಷತೆ : **ಡಾ. ಬೈರಮಂಗಲ ರಾಮೇಗೌಡ**

ಮೊದಲಚಿತ್ರ: ಉಪನ್ಯಾಸಕರಾದ ಡಾ.ಎಸ್. ಅನಿಲ್‌ಕುಮಾರ್ ಅವರು ಅಧ್ಯಕ್ಷರಾದ ಡಾ.ಬೈರಮಂಗಲ ರಾಮೇಗೌಡ ಅವರು ಉಪಸ್ಥಿತರಿದ್ದರು.
ಎರಡನೆಯಚಿತ್ರ: ಡಾ.ಶಾಂತರಾಜು ಸ್ವಾಗತ ಕೋರುತ್ತಿರುವುದು

ಆಗಸ್ಟ್ ೧೮೭೨ರಲ್ಲಿ ಜನಿಸಿದ ಎಂ.ಎ. ರಾಮಾನುಜಯ್ಯಂಗಾರ್ ಅವರು ಸಂಸ್ಕೃತ, ಕನ್ನಡ, ತಮಿಳು, ಇಂಗ್ಲಿಷ್ ಭಾಷೆಗಳಲ್ಲಿ ಅದ್ವಿತೀಯ ಪಾಂಡಿತ್ಯ ಪಡೆದಿದ್ದರು. ಮದರಾಸಿನಲ್ಲಿ ಎಫ್.ಎ. ವ್ಯಾಸಂಗ ಮಾಡಿ, ಇಂಜಿನಿಯರಿಂಗ್ ವ್ಯಾಸಂಗ ಮಾಡುವ ಉದ್ದೇಶದಿಂದ ಮದರಾಸಿನಲ್ಲೇ ಓದನ್ನು ಮುಂದುವರೆಸುತ್ತಾರೆ. ಗೃಹಕೃತ್ಯದ ಅನಾನುಕೂಲದಿಂದಾಗಿ ವ್ಯಾಸಂಗ ಬಿಟ್ಟು ಮೈಸೂರಿಗೆ ಮರಳುತ್ತಾರೆ. ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಕನ್ನಡ ಬೋಧಕರಾಗಿ ಸೇವೆಸಲ್ಲಿಸಿದರು. ಗಣಿತದಲ್ಲಿ ಅಪಾರ ಆಸಕ್ತಿಯಿದ್ದ ಕಾರಣ ಮೈಸೂರಿನ ವೆಸ್ಲಿಯನ್ ಮಿಷನ್ ಪಾಠಶಾಲೆಯಲ್ಲಿ ಇದಕ್ಕೂ ಮೊದಲು ಗಣಿತದ ಅಧ್ಯಾಪಕರಾಗಿಯೂ ಸೇವೆಸಲ್ಲಿಸಿದ್ದರು.

೧೮೯೦ರಲ್ಲಿ ಓಲೆಗರಿಗಳಲ್ಲಿದ್ದ ಹಳಗನ್ನಡ ಕಾವ್ಯ, ಪದ್ಯ ಮತ್ತು ಗದ್ಯ ಕಾವ್ಯದ ಅಗಾಧತೆಯನ್ನು ಕಂಡು, ಅವುಗಳನ್ನು ಪ್ರಕಟಿಸುವ ತುಡಿತ ಮತ್ತು ಹಂಬಲ ತೀವ್ರವಾಗಿ ಶ್ರೀ ಎಸ್.ಜಿ.ನರಸಿಂಹಾಚಾರ್ ಅವರೊಂದಿಗೆ ಕೈ ಜೋಡಿಸಿದ ಪರಿಣಾಮವೇ ೧೮೯೨ರಲ್ಲಿ 'ಕರ್ಣಾಟಕ ಕಾವ್ಯಮಂಜರಿ' ಪ್ರಕಟಣಾ ಸಂಸ್ಥೆಯ ಉಗಮ. ಉದ್ದಾಮ ಕವಿಗಳ ಹಲವಾರು ಪ್ರಾಚೀನ ಗ್ರಂಥಗಳನ್ನು ಸಂಗ್ರಹಿಸಿ, ಪರಿಶೋಧಿಸಿ ಪ್ರಕಟಿಸಲು ಪ್ರಾರಂಭಮಾಡಿದರು. ೧೯೦೯ರಲ್ಲಿ ನರಸಿಂಹಾಚಾರ್ ಅವರು ನಿಧನರಾದರೂ ಸಹ, ತಮ್ಮ ಕಾರ್ಯದಿಂದ ವಿಮುಖರಾಗದೆ 'ಕರ್ನಾಟಕ ಕಾರ್ಯ ಕಲಾನಿಧಿ' ಎಂಬ ಪ್ರಕಟಣಾ ಸಂಸ್ಥೆಯನ್ನು ಪ್ರಾರಂಭ ಮಾಡಿದರು. ಇಂದಿಗೂ ಹಲವಾರು ವಿದ್ವಾಂಸರುಗಳಿಂದ ಅಧ್ಯಯನಕ್ಕಾಗಿ ಬಹಳ ಬೇಡಿಕೆಯಿರುವ ಕೆಲವು ಪುಸ್ತಕಗಳನ್ನು ಪ್ರತಿಷ್ಠಾನದಲ್ಲಿ ವಿದ್ವಾಂಸರ ಉಪಯೋಗಕ್ಕಾಗಿ ದತ್ತಿದಾನಿಗಳು ನೀಡಿದ್ದಾರೆ.

ರಾಮಾನುಜ ಅಯ್ಯಂಗಾರ್ ಅವರ ದೂರ ಸಂಬಂಧಿ ಶ್ರೀ ಎಂ.ಎ. ವೆಂಕಟೇಶ್ ಅವರು ಸಾರಸ್ವತಲೋಕದಲ್ಲಿ ಅವರ ಹೆಸರನ್ನು ಚಿರಸ್ಥಾಯಿಯಾಗಿ ನಿಲ್ಲಿಸುವ ಉದ್ದೇಶದಿಂದ ೨೦೧೪ರಲ್ಲಿ ಮೇಲಿನ ದತ್ತಿನಿಧಿಯನ್ನು ಸ್ಥಾಪಿಸಿದ್ದಾರೆ. ಈ ದತ್ತಿ ನಿಧಿಯ ಆಶ್ರಯದಲ್ಲಿ ಕೆಲವು ವಿಚಾರ ಗೋಷ್ಠಿಗಳೂ ನಡೆದಿವೆ. ಕರ್ಣಾಟಕ ಕಾವ್ಯ ಮಂಜರಿ ಮತ್ತು ಕರ್ಣಾಟಕ ಕಾವ್ಯ ಕಲಾನಿಧಿಯು ಪ್ರಕಟಿಸಿರುವ ಕೆಲವು ಕೃತಿಗಳನ್ನು ಹಸ್ತಪ್ರತಿ ಸಂಯೋಜನಾಧಿಕಾರಿಗಳಾದ ಶ್ರೀ ಬಿ.ಎಸ್. ಗುರುಪ್ರಸಾದ್ ಅವರು ಸಭೆಗೆ ಪರಿಚಯಿಸಿ ದತ್ತಿನಿಧಿಯ ಪೂರ್ವೇತಿಹಾಸವನ್ನು ನೀಡಿದರು.

ನಂತರ ಪ್ರತಿಷ್ಠಾನದ ಗೌರವ ಕಾರ್ಯದರ್ಶಿಗಳಾದ ಡಾ. ಶಾಂತರಾಜು ಅವರು ಸಭೆಗೆ ಆಗಮಿಸಿದ್ದ ವಿದ್ವಾಂಸರುಗಳನ್ನು ಮತ್ತು ಜಾಲತಾಣದಲ್ಲಿ ವೀಕ್ಷಿಸುತ್ತಿರುವವರನ್ನೂ ಸ್ವಾಗತಿಸಿದರು.

ಈ ದಿನದ ಉಪನ್ಯಾಸಕರಾದ ಡಾ.ಎಸ್.ಅನಿಲ್‌ಕುಮಾರ್ ಅವರು ಪ್ರತಿಷ್ಠಾನದ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಮತ್ತು ಕೋಶಾಧಿಕಾರಿಯಾಗಿ ಸೇವೆಸಲ್ಲಿಸಿದ್ದಾರೆ. ಪ್ರಸ್ತುತ ನ್ಯಾಷನಲ್ ಕಾಲೇಜಿನ ಸ್ನಾತಕೋತ್ತರ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಜೊತೆಗೆ ಸಾಹಿತ್ಯದ ಸಕ್ರಿಯ ವ್ಯಕ್ತಿಯಾಗಿ 'ದ್ರೋಣಾಚಾರ್ಯ' ಎಂಬ ಪುಸ್ತಕವನ್ನೂ ಪ್ರಕಟಿಸಿದ್ದಾರೆ ಎಂದು ಪರಿಚಯಿಸಿದರು.

ಡಾ. ಎಸ್. ಅನಿಲ್‌ಕುಮಾರ್ ಅವರು ತಮ್ಮ ಉಪನ್ಯಾಸದಲ್ಲಿ ದ್ರೋಣಾಚಾರ್ಯರ ಜನನದಿಂದ ಹಿಡಿದು ಮರಣದವರೆಗಿನ ವೃತ್ತಾಂತವನ್ನು ತಿಳಿಸಿದರು. ಒಂದು ಕಡೆ ಮೆಚ್ಚುಗೆ ಮತ್ತೊಂದು ಕಡೆ ಅವಮಾನಗಳ ತೂಗುಯ್ಯಾಲೆಯಲ್ಲಿ ಅವರು ಸಿಕ್ಕ ಸಂದಿಗ್ಧ ಪರಿಸ್ಥಿತಿಯನ್ನು ಉದಾಹರಣೆಗಳೊಂದಿಗೆ ಚಿತ್ರಿಸಿದರು. ಸ್ವಾಭಿಮಾನ, ಪುತ್ರ ವ್ಯಾಮೋಹ, ರಾಜ ಮರ್ಯಾದೆ ಕಾಪಾಡುವ ಭಾರ, ಕೊಟ್ಟ ಮಾತುಗಳನ್ನು ಮೀರದ ಪರಿಸ್ಥಿತಿಗಳ ತೊಳಲಾಟದಲ್ಲಿ ಬೆಂದ ದ್ರೋಣಾಚಾರ್ಯರ ಕರ್ಮವನ್ನು ಸಮರ್ಪಕವಾಗಿ ವಿವರಿಸಿ ಸಭಿಕರ ಮೆಚ್ಚುಗೆಗೆ ಪಾತ್ರರಾದರು. ಸಮಯಾಭಾವದಿಂದ ಪ್ರಸ್ತುತತೆಯ ಬಗ್ಗೆ ಕೆಲವೇ ವಿಷಯಗಳನ್ನು ತೆರೆದಿಟ್ಟರು.

ಅಧ್ಯಕ್ಷತೆ ವಹಿಸಿದ್ದ ಡಾ. ಬೈರಮಂಗಲ ರಾಮೇಗೌಡರು ಮಾತನಾಡುತ್ತಾ ದ್ರೋಣಾಚಾರ್ಯರ ಬಗೆಗಿನ ಅನೇಕ ಲೇಖಕರ ವ್ಯಾಖ್ಯಾನಗಳನ್ನು ಮುಂದಿಡುತ್ತಾ ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ದ್ರೋಣಾಚಾರ್ಯರು ಹೇಗೆ ಕೆಲವು ವಿಷಯಗಳಲ್ಲಿ ಪ್ರಸ್ತುತ ಮತ್ತು ಇನ್ನಿತರ ಸಂದರ್ಭಗಳಲ್ಲಿ ಅಪ್ರಸ್ತುತ ಎಂಬ ಅಂಶವನ್ನು ಎತ್ತಿ ತೋರಿಸಿದರು. ಇದರಲ್ಲಿ 'ಏಕಲವ್ಯ' ನಾಟಕದ ಪ್ರಸಂಗಗಳನ್ನು ಮೆಲುಕು ಹಾಕಿದರು.

ಕೋಶಾಧಿಕಾರಿಗಳಾದ ಡಾ. ಬೆಳವಾಡಿ ಪ್ರಭಾಕರ ಅವರು ವಂದನಾರ್ಪಣೆ ಮಾಡುತ್ತಾ ಭಾರತದಲ್ಲಿ ಪ್ರಸ್ತುತ ಕ್ರೀಡಾಕ್ಷೇತ್ರದ ಉತ್ತಮ ತರಬೇತುದಾರರಿಗೆ ದ್ರೋಣಾಚಾರ್ಯ ಪ್ರಶಸ್ತಿ ನೀಡುತ್ತಿರುವುದನ್ನು ನೆನಪಿಸಿದರು.

ಬಿ.ಎಂ.ಶ್ರೀಕಂಠಯ್ಯ

೨. ಹೊಸಗನ್ನಡದ ನಾಂದಿ

ಡಾ. ರಾಮೇಗೌಡ (ರಾಗೌ)

ಮುಂದುವರೆದ ಭಾಗ–೨

ಬಿ.ಎಂ. ಶ್ರೀಕಂಠಯ್ಯನವರು ಆಧುನಿಕ ಕನ್ನಡ ಸಾಹಿತ್ಯದ ನಿರ್ಮಾಪಕರಲ್ಲಿ ಒಬ್ಬರು. ಕನ್ನಡದ ಕಣ್ವರೆಂದೂ, ಕನ್ನಡದ ಆಚಾರ್ಯ ಪುರುಷರೆಂದೂ, ಕನ್ನಡದ ಕುಲಪತಿಯೆಂದೂ ಬಗೆಬಗೆಯಾಗಿ ಕೀರ್ತಿತರಾದವರು. ಅವರು ಮಾಡಿದ ಕನ್ನಡದ ಪ್ರಚಾರ, ಅನುವಾದಿಸಿದ ಪದ್ಯಗಳ ಪ್ರಭಾವ, ಹೊಸ ರೀತಿಯ ಕನ್ನಡ ನಾಟಕ ರಚನೆ ಇವೆಲ್ಲವೂ ಐತಿಹಾಸಿಕವೂ ರೋಮಾಂಚನಕಾರಿಯೂ ಆಗಿದ್ದವು. ಕನ್ನಡ ಜನರ ಸಂಸ್ಕೃತಿ ಮತ್ತು ಸಾಹಿತ್ಯದಲ್ಲಿ ನೂತನ ಸಂಚಲನವೊಂದನ್ನು ಅವರು ಉಂಟುಮಾಡಿದ್ದು ಈಗ ಚರಿತ್ರೆ.

ಬಿ.ಎಂ.ಶ್ರೀ.ಯವರು ಮೂಲತಃ ಇಂಗ್ಲಿಷ್ ಪ್ರಾಧ್ಯಾಪಕರು. ಆಗ ಎಲ್ಲ ಕಡೆ ಇಂಗ್ಲಿಷ್ ವಾತಾವರಣ ಎಷ್ಟರಮಟ್ಟಿಗೆಂದರೆ, ಕನ್ನಡದಲ್ಲಿ ಮಾತನಾಡುವುದು ತಪ್ಪು ಎಂದು ಆಂಗ್ಲ ಪ್ರಾಧ್ಯಾಪಕರು ನಂಬಿದ್ದ ಕಾಲ. ಇಂಗ್ಲಿಷ್ ಪ್ರಾಧ್ಯಾಪಕರಲ್ಲಿ ಶ್ರೇಣೀಕರಣ ಬೇರೆ, ನಿಜವಾದ ಇಂಗ್ಲಿಷ್ ಪ್ರಾಧ್ಯಾಪಕರೆಂದರೆ ಆಂಗ್ಲ ಜನರೇ, ಇಂಡಿಯನ್ನರಲ್ಲ ಎಂಬ ಭಾವನೆ. ಇಂತಹ ಸಂದರ್ಭದಲ್ಲಿ ಬಿ.ಎಂ.ಶ್ರೀ. ಈ ಭಾವನೆಯನ್ನು ಹೊಡೆದು ಹಾಕಿದರು. ಮೊದಮೊದಲು ಅವರದು ಆಂಗ್ಲ ನಿಷ್ಠೆ; ರಾಜನಿಷ್ಠೆ. ಅವರಿಗೆ 'ರಾಜಸೇವಾಸಕ್ತ' ಎಂಬ ಸಾಂಪ್ರದಾಯಿಕ ಬಿರುದು ಬೇರೆ ಇತ್ತು. ಆದರೆ ಕನ್ನಡಕ್ಕೆ ಬಂದ ಮೇಲೆ, ಕನ್ನಡವನ್ನು ಒಲಿದ ಮೇಲೆ ಹೊಸಗನ್ನಡದ ನಾಂದಿಪುರುಷರಾದರು. ಪ್ರಾಚೀನ ಕನ್ನಡದಲ್ಲಿ ಕಾವ್ಯ ಮತ್ತು ನಾಟಕಗಳನ್ನು ಬರೆಯುವ ಮಟ್ಟಿಗೆ ಪ್ರತಿಭೆ ಮತ್ತು ವಿದ್ವತ್ತನ್ನು ಅವರು ಪಡೆದಿದ್ದರು.

ಬಿ.ಎಂ.ಶ್ರೀ.ಯವರ ವ್ಯಕ್ತಿತ್ವದಲ್ಲಿ ಅವರ 'ವಾಗ್ಮಿತೆ' ಕೂಡ ಸೇರಿದೆ. ಕನ್ನಡದಲ್ಲಿ ಹೇಗೋ ಹಾಗೆಯೇ ಇಂಗ್ಲಿಷ್‌ನಲ್ಲೂ ಭಾಷಣಕಲೆ ಅವರಿಗೆ ಕರಗತ. ಇದರಿಂದ ಅವರು 'ಭಾಷಣ ಕಲೆ' ಕುರಿತು ಇಂಗ್ಲಿಷಿನಲ್ಲಿ ಬರೆಯಲು ಸಾಧ್ಯವಾಯಿತು. ಕನ್ನಡ ಮತ್ತು ಇಂಗ್ಲಿಷಿನಲ್ಲಿ ಅವರು ಗಳಿಸಿದ ಭಾಷಾ ವಿದ್ವತ್ತು ಅಸದೃಶವಾದುದು. ಅವರಿಗೆ ಇಂಗ್ಲಿಷ್ ಅಲ್ಲದೆ ಗ್ರೀಕ್, ಲ್ಯಾಟಿನ್ ಭಾಷೆ ಮತ್ತು ಸಾಹಿತ್ಯದ ಪರಿಚಯ ದೃಢವಾಗಿಯೇ ಇತ್ತು. ದ್ರಾವಿಡ ಭಾಷೆಗಳಲ್ಲಿ ಕನ್ನಡವಲ್ಲದೆ, ತಮಿಳು ಮತ್ತು ತೆಲುಗುಗಳ ಪರಿಚಯ ಕೂಡ ಇತ್ತು. ಸಂಸ್ಕೃತವಲ್ಲದೆ ಪಾಲಿ, ಮಾಗಧಿ, ಬಂಗಾಳಿ ಭಾಷೆಗಳ ಪರಿಚಯವಿದ್ದಿತೆಂದು ಬಲ್ಲವರು ಹೇಳುತ್ತಾರೆ. ಅವರಿಗೆ ಶಾಸ್ತ್ರ ಮತ್ತು ಸಾಹಿತ್ಯಗಳೆರಡರಲ್ಲಿಯೂ ಪ್ರವೇಶವಿದ್ದುದರಿಂದ ಭಾಷಣವಾಗಲಿ, ಬರವಣಿಗೆಯಾಗಲಿ, ಬೋಧನೆಯಾಗಲಿ ಕಷ್ಟವೆನಿಸಲಿಲ್ಲ. ವಿಶಿಷ್ಟ ರೀತಿಯ ನೀತಿಗುಣ ಅವರ ವ್ಯಕ್ತಿತ್ವದ ಹೊರ ಒಳಗನ್ನು ರೂಪಿಸಿತ್ತು ಎನ್ನುವುದರಲ್ಲಿ ಸಂಶಯವಿರಲಿಲ್ಲ. ಉಪಾಧ್ಯಾಯ ವೃತ್ತಿ, ಸಾಹಿತ್ಯದ ಕೈಂಕರ್ಯ ಮತ್ತು ನಾಡುನುಡಿಯ ಪ್ರೇಮ ಅವರ ವ್ಯಕ್ತಿತ್ವದ ಅಂತರಂಗವನ್ನು ರೂಪಿಸಿದ ಬಹುಮುಖ್ಯ ಅಂಶಗಳು. ಅವರ ಅಂತಃಕರಣ ಕರುಣಾಪೂರ್ಣವಾಗಿದ್ದರೂ, ಅಷ್ಟೇ ದೃಢಚಿತ್ತರೂ ಆಗಿದ್ದರೆಂಬುದನ್ನು ಅವರ ಸಮಕಾಲೀನರೆಲ್ಲರೂ ಬಲ್ಲವರಾಗಿದ್ದರು.

ಶ್ರೀಕಂಠಯ್ಯನವರು ಬಹುಮುಖ ಪ್ರತಿಭೆಯ ವ್ಯಕ್ತಿ ಎಂಬುದು ಸ್ಪಷ್ಟ; ಅಷ್ಟೇ ಅಲ್ಲ, ಅವರದು ಕಾರ್ಯಶೀಲ ಪ್ರವೃತ್ತಿ. ಕನ್ನಡ ಭಾಷೆಗೆ, ಸೃಜನಶೀಲ ಕ್ಷೇತ್ರಕ್ಕೆ, ವಿದ್ವತ್ತಿನ ಪ್ರಕಾರಕ್ಕೆ ಅವರಿಂದ ಸಂದ ಕೊಡುಗೆ ದೊಡ್ಡದು. ಅವರು ಇಂಗ್ಲಿಷ್ ಮತ್ತು ಕನ್ನಡ ವಿಷಯಗಳೆರಡರಲ್ಲಿಯೂ ಪ್ರಾಧ್ಯಾಪಕರಾಗಿದ್ದುದು, ಕನ್ನಡ ವಿಷಯ ವಿಶ್ವವಿದ್ಯಾಲಯದಲ್ಲಿ ನೆಲೆ ನಿಲ್ಲುವಂತೆ ಮಾಡಿದ್ದು ವಿಶೇಷ. ಅವರು ರಿಜಿಸ್ಟ್ರಾರ್(ಕುಲಸಚಿವ) ಆದುದು ಕನ್ನಡದ ಬೆಳವಣಿಗೆಗೆ ಆಡಳಿತಾತ್ಮಕ ಪ್ರೋತ್ಸಾಹ ದೊರೆಯಿತು. ಈ ಹಿನ್ನೆಲೆಯಲ್ಲಿ ನೋಡಿದಾಗ "ಬಿ.ಎಂ. ಶ್ರೀಕಂಠಯ್ಯನವರಂಥ ಒಬ್ಬ ಸಮರ್ಥರಾದ ವ್ಯಕ್ತಿ ಸರಿಯಾದ ಸ್ಥಾನಕ್ಕೆ ಬಂದದ್ದರಿಂದ ಐವತ್ತು ವರ್ಷ ನಾವು ಅದರ ಸತ್ಫಲವನ್ನು ಅನುಭವಿಸಿದ್ದೇವೆ. ಮುಂದೆ ಇನ್ನು ಐವತ್ತು ವರ್ಷವಾದರೂ ಆ ಫಲ ದೊರಕುತ್ತಿರುತ್ತದೆ" ಎಂಬ ಮಾತು ಬಂದುದೆಂದು ಕಾಣುತ್ತದೆ (ಎ.ಆರ್. ಕೃಷ್ಣಶಾಸ್ತ್ರಿ, ಬಿ.ಎಂ.ಶ್ರೀ. ನೂರರ ನೆನಪು.)

'ಶ್ರೀ'ಯವರು ಕವಿಗಳೂ, ಅನುವಾದಕರೂ, ನಾಟಕಕಾರರೂ, ಭಾಷಣಕಾರರೂ ಆಗಿದ್ದರೆಂಬುದು ಸಾಮಾನ್ಯ ಅಭಿಪ್ರಾಯ. ಈ ಎಲ್ಲ ಕ್ಷೇತ್ರಗಳಲ್ಲಿ ಸಮಾನ ಸಾಧನೆ ಇರಲಿಲ್ಲ ಎಂಬುದು ಬೇರೆಯ ವಿಚಾರ. ಅವರು ಅನೇಕರನ್ನು ಈ ಕ್ಷೇತ್ರಕ್ಕೆ ಸೆಳೆದರೆಂಬುದು ಮುಖ್ಯ ವಿಷಯ. ಕನ್ನಡದ ಸ್ಥಿತಿಯನ್ನು ಸುಧಾರಿಸಲು ಅವರು ಪಟ್ಟ ಶ್ರಮ ಸಾಮಾನ್ಯವಾದುದಲ್ಲ. ಆ ಕಾಲವನ್ನು ನೆನೆಸಿಕೊಂಡರೆ, ಅವರ ಹೋರಾಟ ಎಷ್ಟು ಅನಿವಾರ್ಯವಾಗಿತ್ತು ಎಂಬುದು ಗೊತ್ತಾಗುತ್ತದೆ. ಇದಕ್ಕೆ ಸಂಬಂಧಿಸಿದಂತೆ ಎ.ಎನ್.ಮೂರ್ತಿರಾಯರ ದೃಷ್ಟಿ ಇದು: "ಅವರು ಪ್ರಥಮತಃ ಅಧ್ಯಾಪಕರಲ್ಲ, ಭಾಷಣಕಾರರಲ್ಲ; ಇವೆರಡಕ್ಕಿಂತ ಹೆಚ್ಚಾಗಿ ಕವಿಗಳು, ಅದಕ್ಕಿಂತ ಹೆಚ್ಚಾಗಿ ಅವರು ಸೇನೆಯೊಂದರ ಸೇನಾನಿ, ಕ್ರಾಂತಿಯೊಂದರ ಕೇಂದ್ರ, ಪಂಥವೊಂದರ ಪ್ರವಾದಿ" (ಬಿಎಂಶ್ರೀ: ನೂರರ ನೆನಪು), ಹೀಗೆ ಒಮ್ಮೆಲೇ ಹೇಳಿಬಿಡುವುದು ಸರಿಕಾಣದು. ಅವರು ಒಳ್ಳೆಯ ಅಧ್ಯಾಪಕರಾಗಿದ್ದರೆಂಬುದನ್ನು ಅವರ ಶಿಷ್ಯರೇ ಹೇಳಿದ್ದಾರೆ. ಇದು ವೃತ್ತಿಗೌರವಕ್ಕೆ ಸಂಬಂಧಪಟ್ಟ ವಿಚಾರ, ಭಾಷಣಕಾರರಲ್ಲ ಎನ್ನುವುದೂ ಸರಿಯಲ್ಲ; ಅದಕ್ಕೆ ಕರ್ನಾಟಕದಾದ್ಯಂತ ತಿರುಗಿ ಕನ್ನಡ ಭಾಷಿಗರನ್ನು ಎಚ್ಚರಿಸಿದ್ದು ನಿದರ್ಶನ. ಅವರು ಕವಿ, ಕ್ರಾಂತಿಕಾರ ಎಂಬೆರಡು ಮಾತುಗಳು ಒಪ್ಪುವಂಥವೇ; 'ಕ್ರಾಂತಿಕಾರಿ' ಎನ್ನುವುದು ಭಾಷೆಯ ವಿಚಾರಕ್ಕೆ ಸಂಬಂಧಿಸಿದ್ದು, ವಿಚಾರಕ್ರಾಂತಿಗೆ ಸಂಬಂಧಿಸಿದ್ದಲ್ಲ. ಇನ್ನು ಪಂಥದ ವಿಷಯ – 'ರೊಮ್ಯಾಂಟಿಕ್' ಎಂದರೆ ಸರಿ, 'ನವೋದಯ' ಅದಕ್ಕೂ ವಿಸ್ತಾರವಾದುದು. ಹೀಗೆಲ್ಲಾ ಹೇಳಿಕೆ ಮಾಡುವುದಕ್ಕಿಂತ, ವಾಸ್ತವವಾಗಿ 'ಶ್ರೀ'ಯವರು ಏನು ಮಾಡಿದ್ದಾರೆಂಬುದನ್ನು ನೋಡಿದರೆ ಸಾಕೆನಿಸುತ್ತದೆ.

ಸ್ವಾತಂತ್ರ್ಯ ಚಳುವಳಿಯ ಬಗ್ಗೆ 'ಶ್ರೀ'ಯವರು ಅವಜ್ಞೆ ತೋರಿದ್ದು ಎಳ್ಳಷ್ಟೂ ಸರಿಯಲ್ಲ. ಇದನ್ನು ಆ ಕಾಲಕ್ಕೆ ಕೆಲವರು ಗುರುತಿಸಿದ್ದರೂ, 'ಶ್ರೀ'ಯವರ ಅಭಿಮಾನದ ಮೇಲೆ ಅದನ್ನು ತೆಳುಗೊಳಿಸಿದ್ದರು. ಶಾಮರಾಯರ ಈ ಅಭಿಪ್ರಾಯವನ್ನು ನೋಡಿ: "ಅವರು ನಮ್ಮ

ರಾಷ್ಟ್ರಪಿತ ಮಹಾತ್ಮ ಗಾಂಧಿಯವರ ಹೆಸರನ್ನೆತ್ತಿಕೊಂಡು ನೇರವಾಗಿ ಅಲ್ಲದಿದ್ದರೂ ಸುತ್ತು ಬಳಸಾಗಿ ಸ್ವಲ್ಪ ಲಘುವಾಗಿಯೇ ಮಾತನಾಡಿದ್ದರು. ಮರು ನಿಮಿಷದಲ್ಲಿ ಮೈಸೂರು ಮಹಾರಾಜರನ್ನು ಬಾಯ್ತುಂಬ ಹೊಗಳಿ ಹಾಡಿದರು. ರಾಷ್ಟ್ರಪ್ರೇಮ ಹುಚ್ಚು ಹೊಳೆಯಾಗಿ ಹರಿಯುತ್ತಿದ್ದ ಆ ಕಾಲದಲ್ಲಿ ಈ ಮಾತುಗಳಿಂದ ಮನನೊಂದವರೂ ಉಂಟು. ಆದರೇನು ಮಾಡುವುದು? 'ಶ್ರೀ'ಯವರಿಗೆ ಆಳುವ ಮಹಾಸ್ವಾಮಿಯವರೆಂದರೆ ಎಲ್ಲಿಲ್ಲದ ಅಭಿಮಾನ, ಗೌರವ, ಭಕ್ತಿ. ಇದು ಒಮ್ಮೊಮ್ಮೆ ಅತಿರೇಕಕ್ಕೆ ಹೋಗುತ್ತಿದ್ದುದೂ ಉಂಟು" (ಬಿಎಂಶ್ರೀ: ನೂರರ ನೆನಪು.) ಇದಕ್ಕೆ ಮಹಾರಾಜರು ನೀಡಿದ 'ರಾಜಸೇವಾಸಕ್ತ' ಬಿರುದು, ಜೋಡಿಶಾಲು, ಜರೀಪೇಟ, ಗಂಡಭೇರುಂಡ ಪದಕದ ಬಂಗಾರದ ಹಾರ ಕಾರಣವಾಗಿರಬಹುದು; ಹಾರವನ್ನು ಧರಿಸಿಯೇ ಕಾಲೇಜಿಗೆ ಬಂದರೆಂದೂ, ಅದನ್ನು ಎಲ್ಲರಿಗೂ ಪರಿಚಯಿಸಿದವರೆಂದೂ, ಅದು ಅವರ ಮುಗ್ಧ ಹೃದಯವನ್ನು ತೋರಿಸುತ್ತದೆಂದೂ ಶಾಮರಾಯರು ಬರೆಯುತ್ತಾರೆ. ಆದರೆ ಗಾಂಧೀಜಿಯ ಬಗ್ಗೆ ನೇರವಾಗಿ ಲಘುವಾಗಿ ಮಾತನಾಡಿಲ್ಲವೆಂಬ ಅವರ ಅಭಿಪ್ರಾಯ ಸರಿಯಲ್ಲ. ಗಾಂಧೀಜಿಯವರನ್ನು 'ಹಂಬಗ್' ಎಂದು ಟೀಕಿಸಿದ್ದನ್ನು ಮೂರ್ತಿರಾಯರೇ ಹೇಳಿದ್ದಾರೆ. ಅವರ ಮಾತನ್ನೇ ಇಲ್ಲಿ ಉಲ್ಲೇಖಿಸಲಾಗಿದೆ: "ಬಿ.ಎಂ.ಶ್ರೀಕಂಠಯ್ಯನವರೇ ಗಾಂಧೀಜಿಯನ್ನು 'ಕಲೋಸಲ್ ಹಂಬಗ್ (Colossal humbag), ಎಂದು ಕರೆದರು. (ಅವರು ಆ ಮಾತನಾಡಿದ ಸಭೆಯಲ್ಲಿ ನಾನಿರಲಿಲ್ಲ; ಆದರೆ ಆಡಿದ್ದುಂಟು ಎಂದು ತೀರ್ಮಾನಿಸುವುದಕ್ಕೆ ಸಾಕಷ್ಟು ಆಧಾರಗಳಿದ್ದವು. ಆಗ ನಾವೆಲ್ಲ ಅವರನ್ನು 'ದೇಶದ್ರೋಹಿ' ಎಂದು ಕರೆದೆವು. ಅವರ ಆಂಗ್ಲ ಸಾಹಿತ್ಯ ಪ್ರೇಮ ಮಿತಿಮೀರಿ ಆಂಗ್ಲ ಸರ್ಕಾರಕ್ಕೂ ಸಂದಿತ್ತು. ನನಗೆ ಈಗಲೂ ಅವರ ದೃಷ್ಟಿ ಸರಿ ಎನಿಸುವುದಿಲ್ಲ. ಆದರೆ ಅವರನ್ನು 'ದೇಶದ್ರೋಹಿ' ಎಂದು ಕರೆದದ್ದು ಸಮಸ್ಯೆಯನ್ನು ತೀರ ಸರಳ ಮಾಡಿದಂತಾಯಿತು – ಅದು ಇಂದಿನ ದೃಷ್ಟಿ" (ಸಂಜೆಗಣ್ಣಿನ ಹಿನ್ನೋಟ). ಇಂತಹ ಮಾತನ್ನು ಆ ಕಾಲದಲ್ಲಿ ಹೇಳಬೇಕಾಗಿದ್ದರೆ ಬಹಳ ಧೈರ್ಯ ಬೇಕಾಗಿತ್ತು; ಆ ಧೈರ್ಯವನ್ನು ಬಿಎಂಶ್ರೀ ಪ್ರಕಟಿಸಿದ್ದಾರೆ. ಈ ಮಾತನ್ನು ತಮ್ಮ ಮೇಲಿನ ಬ್ರಿಟಿಷರ ಮತ್ತು ಮಹಾರಾಜರ ಋಣ ತೀರಿಸಲು ಆಡಿರಬಹುದೇ? ಭಾರತದ ಜೀವನ ನವೋದಯಕ್ಕೆ ಕಾರಣರಾದ ಸ್ವಾತಂತ್ರ್ಯ ಶಿಲ್ಪಿ ಗಾಂಧೀಜಿಯ ಕುರಿತು ಸಾಹಿತ್ಯ ನವೋದಯಕ್ಕೆ ಕಾರಣರಲ್ಲಿ ಒಬ್ಬರಾದ 'ಶ್ರೀ'ಯವರು ಆಡಿದರೆಂದರೆ ಅದೊಂದು ದುರದೃಷ್ಟವೆಂದೇ ಹೇಳಬೇಕು. ಗಾಂಧೀಜಿಯ ಪ್ರಾಮಾಣಿಕತೆಯನ್ನು ಪ್ರಶ್ನಿಸುವುದಾದರೆ, ಯಾರ ಪ್ರಾಮಾಣಿಕತೆಯನ್ನು ಬೇಕಾದರೂ ಪ್ರಶ್ನಿಸಬಹುದು; 'ಶ್ರೀ'ಯವರು ಕೂಡ ಇದರಿಂದ ಹೊರತಾಗುವುದಿಲ್ಲ. 'ಶ್ರೀ'ಯವರ ಪ್ರತಿಭೆ ಆಳರಸರ ಕೈಗೆಸಿಕ್ಕಿ – ಇಂಗ್ಲಿಷರು, ಮಹಾರಾಜರು ಯಾರಾದರೂ ಆಗಿರಬಹುದು – ನಲುಗಿಹೋದಂತೆ ಕೂಡ ಕಾಣುತ್ತದೆ. ಅವರಲ್ಲಿ ಅವರಿಗೆ ಶ್ರದ್ಧೆ ಇದ್ದರೆ ನಾವೇನೂ ಮಾಡಲಾರೆವು; ಇಕ್ಕಟ್ಟಾಗಿದ್ದರೆ ಕನಿಕರಕ್ಕೆ ಅವರು ಅರ್ಹರು.

"ಶ್ರೀಯವರ ಸೃಜನಶೀಲತೆ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಹೊಸ ವಾತಾವರಣವನ್ನು ಕಲ್ಪಿಸುವುದರಲ್ಲಿ ಹೆಚ್ಚು ನಿರತವಾದಂತೆ ತೋರುವುದು. ಅದಮ್ಯ ಸೃಜನಶೀಲತೆಯಲ್ಲಿ ತಾನೇ ಭಾಗವಹಿಸುವುದಕ್ಕಿಂತ, ಇತರರ ಅಂತಹ ಸೃಜನೆಯಲ್ಲಿ ಸಂತೋಷ ಪಡುವ ಗುಣವನ್ನು ಹೊಂದಿತ್ತು. ಇದಕ್ಕೆ ಮೂರ್ತಿರಾಯರ ಈ ಮಾತನ್ನು ಗಮನಿಸಿ: "ಶ್ರೀಯವರ ಪ್ರತಿಭೆ ಮಹಾಕೃತಿಯೊಂದರ ಲಯಕ್ಕೆ ಸರಿಯಾಗಿ ಮಿಡಿಯಬಲ್ಲದು, ಅದರ ಕರೆಗೆ ಓಗೊಡಬಲ್ಲದು, ಆದರೆ ತಾನೇ ಆ ಮಟ್ಟದ ಕೃತಿಯನ್ನು ಸೃಷ್ಟಿಸಲಾರದು – ಬಹುಶಃ ಇದು ಅವರ ಪ್ರತಿಭೆಯ ಗುಣ. ಅದನ್ನು ಸೃಷ್ಟಿಶಕ್ತಿಯುಳ್ಳ ಪ್ರತಿಭೆ (Creative Imagination) ಎನ್ನುವುದಕ್ಕಿಂತ ಸೃಷ್ಟಿಶಕ್ತಿಗೆ ಪ್ರತಿಸ್ಪಂದನ ಕೊಡಬಲ್ಲ ಪ್ರತಿಭೆ (Responsible Imagination) ಎಂದರೆ ಸರಿಹೋದೀತೇನೋ" (ಬಿ.ಎಂ.ಶ್ರೀ. ನೂರರ ನೆನಪು). ಈ ಎರಡು ಗುಣಗಳನ್ನು ಅವರ 'ಇಂಗ್ಲಿಷ್ ಗೀತಗಳು' ಮತ್ತು 'ಹೊಂಗನಸುಗಳು' ಸಂಕಲನಗಳೇ ತೋರ್ಪಡಿಸಿವೆ. ಮೊದಲನೆಯದರಲ್ಲಿ ಪ್ರತಿಸ್ಪಂದನ ಪ್ರತಿಭೆ ಗೆದ್ದಿದೆ; ಎರಡನೆಯದರಲ್ಲಿ ಅವರ ಸೃಷ್ಟಿಶೀಲ ಪ್ರತಿಭೆ ಸೋತಿದೆ. ಅವರ ಪ್ರಖ್ಯಾತ ನಾಟಕ 'ಅಶ್ವತ್ಥಾಮನ್' ಕೂಡ 'ಏಜಾಕ್ಸ್' ನಾಟಕದ ನೆರಳಿನಲ್ಲಿಯೇ ನಡೆದದ್ದು ಎಂಬುದನ್ನು ಗಮನಿಸಿದಾಗ ಇದು ಇನ್ನಷ್ಟು ಗಟ್ಟಿಗೊಳ್ಳುತ್ತದೆ. ಅವರ ಶಕ್ತಿ 'ಭಾಷಣ'ದಲ್ಲಿ ಹಂಚಿಹೋಗದಿದ್ದರೆ, ಇನ್ನಷ್ಟು ಕೃತಿಗಳಲ್ಲಿ ಮೈದೋರುತ್ತಿತ್ತೋ ಏನೋ!

'ಶ್ರೀ'ಯವರು ಯುಗನಿರ್ಮಾಣದ ಕೆಲಸವನ್ನು ಮಾಡಿದವರು. ಅವರ 'ಇಂಗ್ಲಿಷ್ ಗೀತಗಳು' ಯುಗಪ್ರವರ್ತಕ ಕೃತಿ ಎಂಬ ಹೆಗ್ಗಳಿಕೆಗೆ ಕಾರಣವಾಯಿತು ಆದರೆ ಅದು ಎಷ್ಟು ಪ್ರಭಾವ ಬೀರಿತು, ಯಾರು ಯಾರು ಅದರ ಪ್ರಭಾವಕ್ಕೆ ಒಳಗಾದರು ಎಂಬ ವಿಷಯ ದಾಖಲಾಗಲಿಲ್ಲ. ಎನ್. ಬಾಲಸುಬ್ರಹ್ಮಣ್ಯ ಅವರು "ಸಾಮಾನ್ಯವಾಗಿ ಯಾವುದೇ ಕೃತಿಯನ್ನು ಆ ಸಾಹಿತ್ಯದ ಯುಗಪ್ರವರ್ತಕ ಕೃತಿ ಎನ್ನುವಲ್ಲಿ ಆ ಕೃತಿ ಸಂಸ್ಕೃತಿಗೆ ಸೇರಿದ, ಆ ಭಾಷೆಯಲ್ಲಿ ರಚಿತವಾದ ಸ್ವತಂತ್ರ ಕೃತಿಯಾಗಿರುತ್ತದೆ" ಎಂದೇನೋ ಹೇಳಿದ್ದಾರೆ (ಬಿಎಂಶ್ರೀ.: ನೂರರ ನೆನಪು). ಈ ಮಾತೇ 'ಇಂಗ್ಲಿಷ್ ಗೀತಗಳು' ಕೃತಿಯ ಮಿತಿಯನ್ನು ಹೇಳುತ್ತದೆ. ಇದಕ್ಕೆ 'ಶ್ರೀ'ಯವರ ಕೃತಿ 'ಅಪವಾದ' ಎಂದು ಅವರು ಹೇಳಿದರೂ, ಸಾಂಸ್ಕೃತಿಕವಾಗಿ ಅದು ಯುಗಪಲ್ಲಟಕ್ಕೆ ಕಾರಣವಾಗಿಲ್ಲ. ಕೇವಲ ಸಾಹಿತ್ಯಕವಾಗಿ ಹೊಸ ನಿರ್ಮಾಣಕ್ಕೆ ಅದು ಕಾರಣವಾಯಿತು. ಈ ಅನುವಾದ ಕೃತಿ ಬಂದ ಕಾಲದಲ್ಲಿಯೇ ಸ್ವತಂತ್ರ ಕವಿತೆಗಳು ಬರುತ್ತಿದ್ದವು ಎಂಬುದನ್ನು ಮರೆಯಲಾಗದು. ಅದರಿಂದ 'ರೂಪ'ವನ್ನು ಹೊಸಗನ್ನಡ ಕಾವ್ಯ ಪಡೆಯಿತೇ ಹೊರತು, ದೃಷ್ಟಿ ಮತ್ತು ವಸ್ತುವನ್ನು ಪಡೆಯಿತೆನ್ನುವುದು ಸರಿಯಲ್ಲ. ಒಂದು ಪಕ್ಷ ವಸ್ತು ಮತ್ತು ದೃಷ್ಟಿಯನ್ನು ಹೊಸಗನ್ನಡ ಕಾವ್ಯ ಪಡೆಯಿತೆನ್ನುವುದಾದರೆ, ಸ್ವತಃ ಬಿಎಂಶ್ರೀಯವರೇ ತಮ್ಮ 'ಹೊಂಗನಸುಗಳು' ಎಂಬ ಸ್ವತಂತ್ರ ಕೃತಿಯಲ್ಲಿ ತರಲಿಲ್ಲವೇಕೆ ಎಂಬ ಪ್ರಶ್ನೆ ಹುಟ್ಟುತ್ತದೆ. 'ಇಂಗ್ಲಿಷ್ ಗೀತಗಳು' ಸೃಷ್ಟಿಸಿದ 'ಹೊಸಯುಗ'ಕ್ಕೆ ಅವರ ಸ್ವತಂತ್ರ ಕೃತಿಯೇ ಹೊರತಾದುದು ವಿಪರ್ಯಾಸವೇ ಸರಿ. ಅವರ ಈ ಅನುವಾದ ಕೃತಿಯ ಮೂಲಕ 'ರೊಮ್ಯಾಂಟಿಕ್ ಪಂಥ' ಮತ್ತು 'ರೊಮ್ಯಾಂಟಿಕ್ ದೃಷ್ಟಿ' (ಅಲ್ಲೇ) ಹೊಸಗನ್ನಡದಲ್ಲಿ ಬೆಳೆಯಿತೆಂಬ ಬಾಲಸುಬ್ರಹ್ಮಣ್ಯ ಅವರ ಮಾತನ್ನು ಒಂದು ಹಂತದಲ್ಲಿ ಒಪ್ಪೋಣ; ಆದರೆ, ಅವರ ಸ್ವತಂತ್ರ ಕೃತಿಯಲ್ಲಿಯೇ ಇದು ಕಾಣದಾಯಿತಲ್ಲ, ಇದಕ್ಕೇನು ಕಾರಣ? ಆದ್ದರಿಂದ, 'ಇಂಗ್ಲಿಷ್ ಗೀತಗಳು' ನಿಜವಾಗಿಯೂ 'ರೊಮ್ಯಾಂಟಿಕ್ ಪಂಥ' ವನ್ನು ಬೆಳೆಯಿಸಿತೆಂಬುದರ ಬಗ್ಗೆ

HONGANASU KANNADA MONTHLY NEWS LETTER, RNI No. KAR/KAN/2015/64049 REGISTERED
Post office Registration No. RNP/KA/BGS/2229/2021-2023 dt. 28-12-2020 Office of Posting: Bengaluru PSO, Bengaluru 560026
Price: Annual Subscription Rs. 20/- Date of Publishing and Posting: 30-10-2023

ಬಿ.ಎಂ.ಶ್ರೀ.ಯವರಿಗೆ ಸ್ಪಷ್ಟ ಕಲ್ಪನೆಯಿದ್ದಿರಲಿಲ್ಲ. ಇಂಗ್ಲಿಷ್ ರೊಮ್ಯಾಂಟಿಕ್ ಪಂಥ ಬಹಳ ಸೀಮಿತವಾದುದು; ಕನ್ನಡ ನವೋದಯ ಇದನ್ನು ಒಳಗೊಂಡಂತೆ ತೀರ ವಿಶಾಲವಾದುದು. ಕನ್ನಡ ನವೋದಯ ಒಂದು ಜೀವನ ದೃಷ್ಟಿಯೇ ಹೊರತು ಪಂಥವಲ್ಲ ಎಂಬುದನ್ನು ಮನಗಾಣಬೇಕು. ಕನ್ನಡ ನವೋದಯ ಮೊದಲ ಬಾರಿಗೆ ಸಾಮಾನ್ಯ ಜೀವನವನ್ನು ಸಾಹಿತ್ಯದಲ್ಲಿ ಉದ್ಘಾಟಿಸಿತು; 'ಶ್ರೀ'ಯವರ 'ಹೊಂಗನಸುಗಳು ಕೃತಿಯ ಜೀವನ ದೃಷ್ಟಿ ಇದನ್ನು ಬೆಳಸುವಂಥದ್ದಾಗಿರಲಿಲ್ಲ ಎಂಬುದನ್ನು ಅನಿವಾರ್ಯವಾಗಿ ಹೇಳಬೇಕು.

(ಮುಂದುವರಿಯುವುದು)

ಹಸ್ತಪ್ರತಿ ವಿಭಾಗ



ಹಸ್ತಪ್ರತಿ ವಿಭಾಗಕ್ಕೆ ಅನೇಕ ಅಮೂಲ್ಯ ಪ್ರತಿಗಳು ಬಂದಿದ್ದು ಅದರ ವಿಂಗಡಣೆ ಕಾರ್ಯ ನಡೆಯುತ್ತಿದೆ.

ಪ್ರಸ್ತುತ ತಿಂಗಳ ಅಂಗಳ

ದಿನಾಂಕ ೦೪-೧೧-೨೦೨೩ ಶನಿವಾರ
ಸಂಜೆ ೫-೦೦ ಗಂಟೆಗೆ
ಶ್ರೀಮತಿ ರಾಣಿ ಗೋವಿಂದರಾಜು ದತ್ತಿ
ಉಪನ್ಯಾಸ ಕಾರ್ಯಕ್ರಮ
ಉಪನ್ಯಾಸಕರು : ಶ್ರೀ ಮಧು ಬಿಲ್ಲನಕೋಟೆ, ಸಾಹಿತಿ, ಪತ್ರಕರ್ತರು ಹಾಗೂ ಕನ್ನಡ ಚಳವಳಿಗಾರರು
ವಿಷಯ : ನ್ನಡದ ಹೆಮ್ಮೆಯ ಹೋರಾಟಗಾರ -- ಜಗದೀಶರೆಡ್ಡಿ

ದಿನಾಂಕ ೧೬-೧೧-೨೦೨೩ ಗುರುವಾರ
ಸಂಜೆ ೦೫.೦೦ ಗಂಟೆಗೆ
ಸರ್ ಸಿ.ವಿ.ರಾಮನ್ ವಿಜ್ಞಾನ ದತ್ತಿ ಉಪನ್ಯಾಸ
ಉಪನ್ಯಾಸಕರು : ಡಾ. ವೈ.ಸಿ. ಕಮಲ, ಪ್ರಾಚಾರ್ಯರು, ನ್ಯಾಷನಲ್ ಕಾಲೇಜು ಬಸವನಗುಡಿ
ವಿಷಯ : ಭಾರತದ ವಿಜ್ಞಾನದ ಬೆಳವಣಿಗೆಯಲ್ಲಿ ಸರ್ ಸಿ.ವಿ.ರಾಮನ್ ಅವರ ಪಾತ್ರ

ದಿನಾಂಕ ೨೭-೧೧-೨೦೨೩ ಸೋಮವಾರ
ಸಂಜೆ ೫.೦೦ ಗಂಟೆಗೆ
ತೀ.ನಂ.ಶ್ರೀ. ಸ್ಮಾರಕ ದತ್ತಿ ಉಪನ್ಯಾಸ
ಉಪನ್ಯಾಸಕರು : ಡಾ. ಡಿ. ಭರತ್
ವಿಷಯ : ತೀ.ನಂ.ಶ್ರೀ. ಅವರ 'ಬಿಡಿ ಮುತ್ತು' (ಮುಕ್ತಕಗಳು)

Printed & Published by : Dr. Ramegowda on behalf of the BMSRI PRATISHTANA, B.M.Sri Pratishtana Road, 3rd Main, N.R. Colony, Bengaluru - 560004 and printed & published at BMSRI PRATISHTANA, B.M.Sri Pratishtana Road, 3rd Main, N.R. Colony, Bengaluru - 560004 Editor : **Dr. Belavadi K. Prabhakar**

ಅಚ್ಚಾದ ಪುಸ್ತಕ Printed Book

ಇವರಿಗೆ,

ಇವರಿಂದ :
ಬಿ.ಎಂ.ಶ್ರೀ. ಪ್ರತಿಷ್ಠಾನ
ಬಿ.ಎಂ.ಶ್ರೀ. ಪ್ರತಿಷ್ಠಾನದ ರಸ್ತೆ, ಪಿನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ, ಬೆಂಗಳೂರು - ೫೬೦೦೦೪
ಮೊಬೈಲ್ : ೯೯೨೨೪೧೧೨೨೨